بِسْمِ اللهِ الرَّحْمٰنِ الرَّحِیْم نَحْمَدُهٗ وَنُصَلِّی عَلٰی رَسُوْلِهِ الْکَرِیْم وَعَلٰی عَبْدِهِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ **ಬದರ್** ವಾರ ಪತ್ರಿಕೆ

WEEKLY **BADAR** QADIAN KANNADA

ಸಂಚಿಕೆ: 34

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**25 ಆಗಸ್ಟ್ 2022, 25 ಸಫರ್ 1401 ಹಿಜರಿ ಶಮ್ಸಿ, 26 ಮುಹರ್ರಮ್ 1444 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاِذَا صُرِفَتْ اَبْصَارُهُمْ
تِلْقَآءَ اَصْحٰبِ النَّارِ قَالُوْا
رَبَّنَا لَا تَجْعَلْنَا مَعَ الْقَوْمِ الظّٰلِمِیْنَ

**(ಅಲ್ ಅಅ್‌ರಾಫ್ : 48)**

**ಅಂದರೆ: ಅವರ (ಸ್ವರ್ಗಾರ್ಹರ) ಕಣ್ಣುಗಳು ನರಕವಾಸಿಗಳ ಮೇಲೆ ಬೀಳುವಾಗ, 'ನಮ್ಮ ಪ್ರಭೂ, ನೀನು ನಮ್ಮನ್ನು ಅಧರ್ಮಿಗಳಾದ ಜನರೊಂದಿಗೆ ಸೇರಿಸಬೇಡ ಎಂದು ಅವರು ಹೇಳುವರು.**

## ಪ್ರವಾದಿ ಮುಹಮ್ಮದ್[(ಸ)]ರವರ ಉಪದೇಶ

**ಮಾರಾಟಗಾರ ಮತ್ತು ಖರೀದಿದಾರರು ಸತ್ಯವನ್ನು ಹೇಳಿದರೆ ಅವರ ಖರೀದಿ ಮತ್ತು ಮಾರಾಟದಲ್ಲಿ ಅನುಗ್ರಹವು ಇರುತ್ತದೆ**

(2079) ಹಝ್ರತ್ ಹಕೀಮ್ ಬಿನ್ ಹಿಝಾಮ್(ರ) ಅವರು ವರದಿ ಮಾಡುತ್ತಾರೆ ಪ್ರವಾದಿ ಮುಹಮ್ಮದ್(ಸ)ರವರು ನುಡಿಯುತ್ತಾರೆ: ಮಾರಾಟಗಾರ ಮತ್ತು ಕೊಳ್ಳುವವರಿಬ್ಬರಿಗೂ ಅವರು ಬೇರ್ಪಡುವವರೆಗೆ (ಮಾರಾಟವನ್ನು ರದ್ದುಗೊಳಿಸುವ) ಅಧಿಕಾರವನ್ನು ಹೊಂದಿರುತ್ತಾರೆ ಅಥವಾ ಅವರು ಪ್ರತ್ಯೇಕಗೊಳ್ಳುವವರೆಗೆ ಎಂದು ಹೇಳಿದರು. ಅವರಿಬ್ಬರೂ ಸತ್ಯವಾಗಿ ವರ್ತಿಸಿದರೆ ಮತ್ತು ಪ್ರಾಮಾಣಿಕವಾಗಿ ಮಾತನಾಡಿದರೆ, ಅವರ ಕೊಳ್ಳುವಿಕೆ ಮತ್ತು ಮಾರಾಟದಲ್ಲಿ ಇಬ್ಬರೂ ಧನ್ಯರಾಗುತ್ತಾರೆ ಮತ್ತು ಇಬ್ಬರೂ ಮುಚ್ಚಿಟ್ಟು ಸುಳ್ಳು ಹೇಳಿದರೆ, ಅವರ ಕೊಳ್ಳುವಿಕೆ ಮತ್ತು ಮಾರಾಟದ ಅನುಗ್ರಹವು ಅಳಿಸಿಹೋಗುತ್ತದೆ.

**ಯಾರಾದರೂ ಆಹ್ವಾನಿಸದ ಅತಿಥಿಗಳೊಂದಿಗೆ ಬಂದರೆ**

(2081) ಹಝ್ರತ್ ಅಬು ಮಸೂದ್(ರ) ಅವರು ವರದಿ ಮಾಡುತ್ತಾರೆ ಅವರು ಹೇಳಿದರು: ಓರ್ವ ಅನ್ಸಾರಿ ವ್ಯಕ್ತಿ ಬಂದರು, ಅವರ ಉಪನಾಮ ಅಬು ಶುಐಬ್ ಎಂದಿತ್ತು, ಅವನು ಕಟುಕನಾಗಿದ್ದ ತನ್ನ ಹುಡುಗರಲ್ಲಿ ಒಬ್ಬನನ್ನು ನನಗೆ ಐದು ಜನರಿಗೆ ಸಾಕಾಗುವಷ್ಟು ಆಹಾರವನ್ನು ತಯಾರಿಸಲು ಹೇಳಿದರು, ಏಕೆಂದರೆ ನಾನು ಪ್ರವಾದಿ(ಸ) ಅವರಿಗೆ ಆಹ್ವಾನಿಸಲು ಬಯಸುತ್ತೇನೆ..... ನನಗೆ ಅವರ(ಸ) ಮುಖದಲ್ಲಿ ಹಸಿವು ಕಂಡುಬಂದಿತು. ಹೀಗಾಗಿ ಅವರು ಆ ಎಲ್ಲಾ ಜನರನ್ನು ಆಹ್ವಾನಿಸಿದಾಗ ಅವರೊಂದಿಗೆ ಇನ್ನೋರ್ವ ವ್ಯಕ್ತಿಯೂ ಆಗಮಿಸಿದನು. ಅದಕ್ಕೆ ಪ್ರವಾದಿ(ಸ) ನುಡಿದರು ಇವನು ನಮ್ಮೊಂದಿಗೆ ಆಗಮಮಿಸಿದ್ದಾನೆ, ನೀವು ಬಯಸಿದರೆ ಅವನಿಗೆ ಅನುಮತಿಸಬಹುದು ಇಲ್ಲದಿದ್ದರೆ ನೀವು ಹಿಂತಿರುಗಲು ಸಿಳಿಸಿದರೆ, ಅವನು ಹಿಂತಿರುಗುತ್ತಾನೆ. ಅವರು ಇಲ್ಲ ನಾನು ಅವರಿಗೆ ಬರುವುದಕ್ಕೆ ಅನುಮತಿ ನೀಡುತ್ತೇನೆ ಎಂದು ಹೇಳಿದರು. **(ಬುಖಾರಿ, ಸಂಪುಟ–4, ಕಿತಾಬ್ ಅಲ್–ಬಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

**ಆತ್ಮದ ಆನಂದ ಯಾವುದರಲ್ಲಿದೆ ಎಂದು ಜಗತ್ತಿಗೆ ತಿಳಿದಿದ್ದರೆ ಅದು ಪವಿತ್ರ ಖುರ್‌ಆನ್‌ನಲ್ಲಿ ಮಾತ್ರ ಇದೆ ಎಂದರು ತಿಳಿಯುತ್ತಿತ್ತು.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ನಾನು ನೋಡುವುದೇನೆಂದರೆ ಪ್ರಪಂಚದ ಗಮನವು ಈಗ ಭೂ ವಿಜ್ಞಾನಗಳ ಮೇಲೆ ಹೆಚ್ಚು ಬಾಗಿದೆ ಮತ್ತು ಪಾಶ್ಚಾತ್ಯ ಜ್ಞಾನೋದಯವು ತನ್ನ ಹೊಸ ಆವಿಷ್ಕಾರಗಳು ಮತ್ತು ಉದ್ಯಮಗಳಿಂದ ಜಗತ್ತನ್ನು ಬೆರಗುಗೊಳಿಸಿದೆ. ಮುಸಲ್ಮಾನರು ತಮ್ಮ ಶ್ರೇಯೋಭಿವೃದ್ಧಿಗೆ ಉಪಾಯವನ್ನು ಆಲೋಚಿಸಿದರೂ ದುರದೃಷ್ಟವಶಾತ್ ಪಾಶ್ಚಾತ್ಯರನ್ನೇ ಇಮಾಮ್‌ಗಳನ್ನಾಗಿ ಮಾಡಿಕೊಂಡು ಯೂರೋಪಿನ ಅನುಕರಣೆಯನ್ನು ಹಿಂಬಾಲಿಸಿ ಹೆಮ್ಮೆ ಪಡಬೇಕು ಎಂದೆನಿಸಿಕೊಂಡರು. ಇದು ಹೊಸ ಬೆಳಕಿನ ಮುಸಲ್ಮಾನರ ಪರಿಸ್ಥಿತಿಯಾಗಿದೆ, ಹಳೆಯ ಶೈಲಿಯ ಮುಸ್ಲಿಮರು ಎಂದೆನಿಕೊಳ್ಳುವವರು ತಮ್ಮನ್ನು ತಾವು ಧರ್ಮದ ಬೆಂಬಲಿಗರು ಎಂದು ಪರಿಗಣಿಸುತ್ತಾರೆ, ಅವರ ಸಂಪೂರ್ಣ ಜೀವನದ ಸಾರಾಂಶವೆಂದರೆ ಅವರು ಅರಬಿಯ ವ್ಯಾಕರಣ (ಸರ್ಫ್ ವ ನಹು) ಮತ್ತು ಉಚ್ಚಾರಣೆಯ ವಿವಾದಗಳಲ್ಲಿ ಮಾತ್ರ ಸಿಲುಕಿಕೊಂಡಿದ್ದಾರೆ. ಅವರು ಪವಿತ್ರ ಖುರ್‌ಆನ್ ಕಡೆ ಗಮನ ಕೊಡುವುದಿಲ್ಲ ಮತ್ತು ಅದನ್ನು ಏಕೆ ನಿರಾಕರಿಸುತ್ತಾರೆ ಎಂದರೆ ಅವರು ಸ್ವಯಂ ಶುದ್ಧೀಕರಣಕ್ಕೆ ಗಮನ ಕೊಡುವುದಿಲ್ಲ.

ಹೌದು, ಆತ್ಮಶುದ್ಧಿ ಎಂದು ಹೇಳಿಕೊಳ್ಳುವ ಗುಂಪು ಇದ್ದರೆ ಅದು ಸೂಫಿಗಳು ಮತ್ತು ಸಜ್ಜಾದ ನಶೀನ್ (ಪೀಠಾದಿಪತಿಗಳು) ಅವರ ಗುಂಪಾಗಿದೆ, ಆದರೆ ಈ ಜನರು ಪವಿತ್ರ ಖುರ್‌ಆನ್ ಅನ್ನು ತ್ಯಜಿಸಿ ತಮ್ಮದೇ ಆದ ವಿಧಾನಗಳನ್ನು ಕಂಡುಹಿಡಿದಿದ್ದಾರೆ. ಯಾರೋ ಚಿಲ್ಲ ಕಶೀ ಮಾಡುತ್ತಾರೆ, ಯಾರೋ ಅಲ್ಲಾಹನ ಘೋಷಣೆಗಳನ್ನು ಕೂಗುತ್ತಾರೆ, ಯಾರೋ ನಕಾರಾತ್ಮಕ ದೃಢೀಕರಣಗಳು, ಗಮನ, ಮಾಟ ಮಂತ್ರಗಳ ಸೆರೆವಾಸ ಇತ್ಯಾದಿಗಳಲ್ಲಿ ಸಿಲುಕಿ ಬಳಲುತ್ತಿದ್ದಾರೆ. ಹೀಗೆ ಪ್ರವಾದಿ ಮುಹಮ್ಮದ್(ಸ) ರವರಿಂದ ಸಾಬೀತುಪಡಿಸದ ವಿಧಾನಗಳನ್ನು ಅನುಸರಿಸುತ್ತಾರೆ. ಇದು ಪವಿತ್ರ ಖುರ್‌ಆನ್‌ನ ಮೂಲವಲ್ಲ ಮತ್ತು ಅಂತಹ ವಿಧಾನಗಳನ್ನು ಪ್ರವಾದಿ(ಸ) ರವರು ಎಂದಿಗೂ ಇಷ್ಟಪಡಲಿಲ್ಲ. ಹೀಗಾಗಿ ನೆನಪಿಡಬೇಕಾದ ವಿಷಯವೇನೆಂದರೆ ಎಲ್ಲಿಯ ತನಕ ಓರ್ವ ವ್ಯಕ್ತಿಯು ಶುದ್ಧವಾದ ಬದಲಾವಣೆಯನ್ನು ತನ್ನಲ್ಲಿ ಮಾಡುವುದಿಲ್ಲವೋ ಮತ್ತು ಆತ್ಮವನ್ನು ಶುದ್ಧೀಕರಿಸುವುದಿಲ್ಲವೋ, ಪವಿತ್ರ ಖುರ್‌ಆನ್‌ನ ಬೋಧನೆಗಳು ಮತ್ತು ಸದ್ಗುಣಗಳ ಬಗ್ಗೆ ಅವನಿಗೆ ಯಾವುದೇ ಮಾಹಿತಿ ಇರುವುದಿಲ್ಲವೋ, ಪವಿತ್ರ ಖುರ್‌ಆನ್‌ನಲ್ಲಿ ಆತ್ಮದ ಬಾಯಾರಿಕೆಯನ್ನು ತಣಿಸುವ ಅಂಶಗಳು ಮತ್ತು ಸತ್ಯಗಳಿವೆ.

ಆತ್ಮದ ಆನಂದ ಯಾವುದರಲ್ಲಿದೆ ಎಂದು ಜಗತ್ತಿಗೆ ತಿಳಿದಿದ್ದರೆ ಅದು ಪವಿತ್ರ ಖುರ್‌ಆನ್‌ನಲ್ಲಿ ಮಾತ್ರ ಇದೆ ಎಂದು ಅವರು ತಿಳಿಯುತ್ತಿದ್ದರು.

**(ಮಲ್‌ಫೂಝಾತ್, ಸಂಪುಟ–1, ಪುಟ–385, ಮುದ್ರಿತ ಖಾದಿಯಾನ್ 2018)**

**ಎಲ್ಲಾ ಮಾನವ ಆತ್ಮಗಳು, ಅವರ ದೇಹಗಳು ಜಗತ್ತಿನಲ್ಲಿ ವಾಸಿಸುತ್ತಿದ್ದವೇ ಎಂಬುದನ್ನು ಲೆಕ್ಕಿಸದೆ, ಒಟ್ಟುಗೂಡಿಸಲಾಗುತ್ತದೆ ಮತ್ತು ಪ್ರತಿಯೊಂದು ಜನಾಂಗದ ಪ್ರವಾದಿಯರನ್ನು ಮುಂದೆ ತರಲಾಗುತ್ತದೆ ಮತ್ತು ಅವರು ತನ್ನ ಜನಾಂಗದ ಬಗ್ಗೆ ಸಾಕ್ಷಿ ಹೇಳುತ್ತಾರೆ. ಖಿಯಾಮತ್ ದಿನದಂದು ಪ್ರವಾದಿಗಳನ್ನು ಸಾಕ್ಷಿಗಳಾಗಿ ಎಬ್ಬಿಸಲಾಗುವುದು ಎಂದು ಅವರು ಹೇಳಿದರು ನನ್ನ ಪ್ರಕಾರ, ಪ್ರವಾದಿಗಳ ಸಾಕ್ಷಿ ಎಂದರೆ ಅವರ ಉದಾಹರಣೆ, ಅವರು ತಮ್ಮ ಉದಾಹರಣೆಯನ್ನು ಪ್ರಸ್ತುತಪಡಿಸುತ್ತಾರೆ**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಾ ಅಲ್–ನಹ್ಲ್ ಆಯತ್ 85 **ವಯೌಮ ನಬ್‌ಅಸು ಮಿನ್ ಕುಲ್ಲಿ ಉಮ್ಮತಿನ್ ಶಹೀದನ್ ಸುಮ್ಮ ಲಾ ಯುಅ್‌ಝನು ಲಿಲ್ಲಝೀನ ಕಫರೂ ವಲಾಹುಮ್ ಯುಸ್‌ತಅ್‌ತಬೂನ** ನ ವ್ಯಾಖ್ಯಾನ ಮಾಡುತ್ತ ಹೇಳಿದರು:

**ತಫ್ಸೀರ್:** ಈ ದೊಡ್ಡ ಅಪರಾಧವನ್ನು ಪ್ರಸ್ತಾಪಿಸಿದ ನಂತರ, ಅವರು ಮರಣಾನಂತರದ ಜೀವನವನ್ನು ಉಲ್ಲೇಖಿಸಿದರು, ಈ ಜಗತ್ತಿನಲ್ಲಿ ಈ ಅಪರಾಧಕ್ಕಾಗಿ ಶಿಕ್ಷೆಗೆ ಒಳಗಾಗುತ್ತೀರಿ, ಆದರೆ ಪರಲೋಕದಲ್ಲಿಯೂ ಸಹ ನೀವು ಇನ್ನೂ ಹೆಚ್ಚಿನ ಶಿಕ್ಷೆಗೆ ಒಳಗಾಗುತ್ತೀರಿ ಮತ್ತು ಶಿಕ್ಷೆ ಮತ್ತು ಅವಮಾನವು ತುಂಬಾ ಕಠಿಣವಾಗಿರುತ್ತದೆ ಏಕೆಂದರೆ ಎಲ್ಲಾ ಮಾನವ ಆತ್ಮಗಳನ್ನು ಶಿಕ್ಷಿಸಲಾಗುತ್ತದೆ, ಅವರ ದೇಹಗಳು, ಅವರು ಯಾವುದೇ ಸಮಯದಲ್ಲಿ

*(ಪುಟ ಸಂಖ್ಯೆ–11ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ಪೀರ್ ಮಹೆರ್ ಅಲಿ ಮತ್ತು ಅಲಿ ಹಾಯೆರಿ ಅವರಿಗೆ ಅರಬಿ ಕವನ ಸಾಲುಗಳನ್ನು ಬರೆಯಲು ಸವಾಲು. ಅವರ ಕವನ ಸಾಲುಗಳು ಸಾಹಿತ್ಯದಲ್ಲಿ ನನಗಿಂತ ಉತ್ತಮ ಎಂದು ಸಾಬೀತಾದರೆ ಇಬ್ಬರು ಎದುರಾಳಿಗೆ ಒಂದೊಂದು ನೂರು ರೂಪಾಯಿ ಬಹುಮಾನ ನೀಡಲಾಗುವುದು.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಸವಾಲು ನಾವು ಅವರ ಗ್ರಂಥ "ನುಝೂಲುಲ್ ಮಸೀಹ್ "ರೂಹಾಹಿ ಖಝಾಯನ್ ಸಂಪುಟ 18 ರಿಂದ ಪ್ರಸ್ತುತಪಡಿಸುತ್ತಿದ್ದೆವು. ಪೀರ್ ಮೆಹರ್ ಅಲಿ ಶಾ ಗೋಲ್ಡವಿ ನಾವು ಹೇಳಿದಂತೆ ಹಝ್ರತ್ ಮಸೀಹ್ ಮೌಊದ್(ಅ) ರವರ ಕಡುವೈರಿಯಾಗಿದ್ದ. ಅವನಿಗೆ ಖುರ್‌ಆನ್‌ನ ಜ್ಞಾನ ಮತ್ತು ದೈವಿಕ ಸಾನಿಧ್ಯದ ದಾವೆ ಇತ್ತು. ಹಾಗೆ ಈ ವ್ಯಕ್ತಿ ಜನರಿಗೆ ದಾರಿ ತಪ್ಪಿಸುತ್ತಿದ್ದ. ಆದುದರಿಂದ ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಅವನ ಸುಳ್ಳು ಪ್ರತಿಷ್ಠೆ ಹೊರ ಬರುವಂತೆ ಮಾಡಿ ಜನರು ಮೋಸದಿಂದ ಪಾರಾಗುವಂತೆ ಮಾಡುವುದು ಹಾಗೂ ತಮ್ಮ ಸತ್ಯತೆ ಸಾಬೀತುಪಡಿಸುವುದು ಅವಶ್ಯಕವಾಗಿತ್ತು.

ಹಾಗೆ ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ಲಾಹೋರ್‌ನಲ್ಲಿ ಜನರ ಸಮಕ್ಷಮದಲ್ಲಿ ಒಂದೇ ಸಭೆಯಲ್ಲಿ ಪವಿತ್ರ ಖುರ್‌ಆನ್‌ನ ಯಾವುದೇ ಅಧ್ಯಾಯದ 40 ವಚನಗಳ ವ್ಯಾಖ್ಯಾನ (ತಫ್ಸೀರ್) ಬರೆಯಲು ಸವಾಲು ಎಸೆದರು. ಅಲ್ಲಾಹನು ಯಾರೊಂದಿಗಿದ್ದಾನೆ ಎಂದು ಇದರಿಂದ ತಿಳಿಯಬಹುದು. ಏಕೆಂದರೆ ಸ್ವಯಂ ಅಲ್ಲಾಹನು ನುಡಿದಿರುವನು. ಅವನ ಜ್ಞಾನ, ಸಾಕ್ಷಗಳು ಮತ್ತು ರಹಸ್ಯಗಳು ಪರಿಶುದ್ಧ ಜನರಿಗೆ ಹೊರತು ಬೇರೆಯವರಿಗೆ ನೀಡಲಾಗುವುದಿಲ್ಲ. ಅವನ ದಾವೆಯ ಹಾಗೆ ಮೆಹರ್ ಅಲಿ ಪರಿಶುದ್ಧನು, ತಾನು ಅಲ್ಲಾಹನ ಸಾನಿಧ್ಯ ಪಡೆಯುವವನಾಗಿದ್ದರೆ, ಅದು  ಹಝ್ರತ್ ಮಸೀಹ್ ಮೌಊದ್(ಅ) ಅವರನ್ನು ಸೋಲಿಸಿ ಅವರ ಸಂಘಟನೆ ನಾಶಪಡಿಸಬಹುದಿತ್ತು. ಆದರೆ ಸ್ಪರ್ಧೆಯಿಂದ ಅವನು ಪಲಾಯನಗೈಯ್ಯುವುದು ತೋರಿಸಿರುವುದೇನೆಂದರೆ ಅವನು ಸತ್ಯವಂತನಾಗಿರಲಿಲ್ಲ. ಬದಲು ಸುಳ್ಳುಗಾರನಾಗಿದ್ದನು. ನಂತರ ಅವರು ತೊಹಫ ಗೋಲ್ಡವಿಯದ ಎಲ್ಲಾ ಪುರಾವೆಗಳನ್ನು ಸುಳ್ಳೆಂದು ಸಾಬೀತುಪಡಿಸಿದರೆ  ಪೀರ್ ಮೆಹರ್ ಅಲಿ ಶಾ ಗೆ ಐವತ್ತು ರೂಪಾಯಿಯ ಬಹುಮಾನ ಇಟ್ಟರು. ಅನಂತರ ಅವರು ಪೀರ್ ಸಾಹಿಬರನ್ನು ಆಹ್ವಾನಿಸಿದರು. ಒಂದು ಸಾರ್ವಜನಿಕ ಸಭೆಯಲ್ಲಿ 3 ಗಂಟೆಗಳ ಕಾಲ ನಾನು ನನ್ನ ದಾವೆ ಕುರಿತು ಮತ್ತು ಸಾಕ್ಷ್ಯಗಳ ಕುರಿತು ವಿವರಿಸುವೆನು. ಅದಾದ ನಂತರ ನೀವು ಮೂರು ಗಂಟೆಗಳ ಕಾಲ ಮಸೀಹರ ಜೀವಂತಿಕೆ ಮತ್ತು ಆಕಾಶದಿಂದ ಅವರ ಬರುವಿಕೆ ಕುರಿತು ವಿವರಿಸಬೇಕು. ಆಗ ಜನರು ನಮ್ಮಿಬ್ಬರ ಭಾಷಣಗಳನ್ನು ಸ್ವಯಂ ಪರೀಕ್ಷಿಸಿ ನೋಡಲಿ.  ಅದಾದ ನಂತರ ಅವರು ಪೀರ್ ಮೆಹರ್ ಅಲಿ ಶಾಗೆ ಸೂರಃ ಫಾತಿಹಾದ ತಫ್ಸೀರ್ ಬರೆಯಲು ಸವಾಲು ಹಾಕಿದರು. ಆನಂತರ ಅವರು ಆ ತಫ್ಸೀರ್‌ಗಳಿಂದ ನ್ಯೂನತೆ ಹುಡುಕಿಕೊಟ್ಟಲ್ಲಿ, ಒಂದೊಂದು ತಪ್ಪಿಗೆ ಐದು ರೂಪಾಯಿ ಕೊಡುವ ಸವಾಲು ಹಾಕಿದರು. ಆನಂತರ ಅವರು ತಮ್ಮ ಎದುರಿನಲ್ಲಿ ಕವನ ಸಾಲುಗಳನ್ನು ಬರೆಯಲು ಸವಾಲು ಹಾಕಿದರು. ಹೀಗೆ ಅವರು ಮೇಲಿಂದ ಮೇಲೆ ಪಂಥಾಹ್ವಾನ ನೀಡಿದರು. ಇವೆಲ್ಲಾ ಸವಾಲುಗಳ ವಿವರ ನಾವು ಹಿಂದಿನ ಸಂಚಿಕೆಗಳಲ್ಲಿ ನೀಡಿರುತ್ತೇವೆ. ಈ ಸಂಚಿಕೆಯಲ್ಲಿ ನಾವು ಅವರ ಕೊನೆಯ ಸವಾಲಿನ ಕುರಿತು ವಿವರಿಸುವೆವು. ಪೀರ್ ಮೆಹರ್ ಅಲಿ ಶಾ ಅವರು "ಸೈಫ್ ಚಿಶ್ತಿಯಾಯಿ" ಗ್ರಂಥದಲ್ಲಿ (ಅದು ಅನರ್ಥಕ ಅಪವಾದಗಳಿಂದ ಕೂಡಿದ್ದಾಗಿದೆ) ಹಝ್ರತ್ ಮಸೀಹ್ ಮೌಊದ್ ಅವರ ಮೇಲೆ ಕೃತಿಚೌರ್ಯದ ಆರೋಪ ಹಚ್ಚಲಾಗಿತ್ತು.  ಅಲ್ಲಾಹನು ಅದರ ಸೇಡು ಪೀರ್ ಮೆಹರ್ ಅಲಿಯಿಂದ ಯಾವ ರೀತಿ ತೀರಿಸಿಕೊಂಡನೆಂದರೇ ಸೈಫ್ ಚಿಶ್ತಿಯಾಯಿ ಪೀರ್ ಮೆಹರ್ ಅಲಿ ಅವರ ಕೃತಿಯಾಗಿರಲಿಲ್ಲ.  ಬದಲು ಮುಹಮ್ಮದ್ ಹಸನ್ ಭೇಸ್ ಅವರ ಟಿಪ್ಪಣಿಗಳನ್ನು ಕದ್ದು ಬರೆಯಲಾಗಿತ್ತು. (ಅದರ ವಿವರ ನಾವು ಹಿಂದಿನ ಸಂಚಿಕೆಯಲ್ಲಿ ನೀಡಿದ್ದೆವು). ನಂತರ ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಒಂದು ಕೊನೆಯ ಅಸ್ತ್ರವಾಗಿ ಅವರನ್ನು ಸ್ಪರ್ಧಿಯಾಗಲು ಆಹ್ವಾನಿಸಿದರು. ಅದು ನಾವು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್ (ಅ) ರವರ ಪದಗಳಲ್ಲಿ ಈ ಕೆಳಗೆ ಪ್ರಸ್ತುತಪಡಿಸುತ್ತಿರುವೆವು.

**ಕವನ ಸಂಗ್ರಹದಲ್ಲಿ ಸ್ಪರ್ಧಿಸಲು ಆಹ್ವಾನ ಮತ್ತು ಎರಡು ನೂರು ರೂಪಾಯಿಗಳ ವೈಭವಯುತ ಬಹುಮಾನದ ಪಂಥಾಹ್ವಾನ.**

ಸಯ್ಯದನಾ ಹಝ್ರತ್ ಮಸೀಹ್ ಮೌವೂದ್(ಅ) ಹೇಳುತ್ತಾರೆ. ಪೀರ್ ಮೆಹರ್ ಅಲಿ ಸಾಹಿಬ್ ನನಗೆ ಮಿಥ್ಯನೆಂದು ಸಾರಿದ್ದರಿಂದ ಮತ್ತು ಕಳ್ಳ ಎಂದು ಹೇಳಿದ್ದರಿಂದ ಮತ್ತು ಪದೇ ಪದೇ ಮುಬಾಹಲ ರೂಪದಲ್ಲಿ ನನ್ನ ಮೇಲೆ ಶಾಪ ಹೇಳಿದ್ದರಿಂದ, ನಾನು ನನ್ನ ಸತ್ಯತೆ ಜನರ ಮೇಲೆ ತಿಳಿಗೊಳಿಸಲು ಮೂರನೇ ಸಲ ಪೀರ್ ಮೆಹರ್ ಅಲಿ ಶಾ ಸಾಹಿಬ್ ಅವರಿಗೆ ಅವಕಾಶ ನೀಡುತ್ತೇನೆ. ಅದು ಇದಾಗಿದೆ. ನಾನು ನಿಶ್ಚಯಿಸಿಕೊಂಡಿದ್ದೇನೆಂದರೆ ಈ ಪತ್ರಿಕೆಯ ಕೊನೆಯಲ್ಲಿ ಅಲ್ಲಾಹನು ಬಯಸಿದರೆ ಕೆಲವು ಅರಬಿ ಕವನ ಸಾಲುಗಳು ಬರೆಯುವೆನು. ಮತ್ತು ಪೀರ್ ಮೆಹರ್ ಅಲಿ ಸಾಹಿಬರಿಂದ, ಮತ್ತೊಬ್ಬ ವ್ಯಕ್ತಿ (ಅವನು ಶಿಯಾ ಆಗಿದ್ದಾನೆ) ಅಲಿ ಹಾಯರಿ ಈ ಕವನ ಸಾಲುಗಳನ್ನು ಬರೆಯಲು ಅಪೇಕ್ಷಿಸುವೆವು, ವಿನಂತಿಸಿಕೊಳ್ಳುವುದೇನೆಂದರೆ ಆ ಕವನ ಸಲುಗಳನ್ನು ವಿಷಯ ಬದ್ಧತೆಯಿಂದ ಪ್ರಸ್ತುತಪಡಿಸಿ ಪೀರ್ ಸಾಹಿಬ್ ತನ್ನ ಪವಾಡವನ್ನು ತೋರಿಸಲಿ, ಹಾಗೆಯೇ ಅಲಿ ಹಾಯರಿ ಸಾಹಿಬ್ ಇಮಾಮ ಹುಸೇನರ ಪವಾಡ. ಹೀಗೆ ಮಾಡಿ ತೋರಿಸಿದರೆ, ಎಷ್ಟು ಸಂಖ್ಯೆಯಲ್ಲಿ ನಾವು ಈ ಸಾಲುಗಳನ್ನು ಬರೆದೆವು ಮತ್ತು ಯಾವ ವಿಷಯ ಸಂಬಂಧವಾಗಿ ಈ ಸಾಲುಗಳಾಗಿವೆ. ಈ ಎರಡು ಶರತ್ತುಗಳೊಂದಿಗೆ ಪಾಂಡಿತ್ಯ ರೀತಿಯಲ್ಲಿ, ಈ ಎರಡು ಸಜ್ಜನರು ಅಥವಾ ಅವರಲ್ಲಿ ಯಾರೊಬ್ಬರಾದರೂ ಪೂರ್ಣಗೊಳಿಸಿ ತೋರಿಸಿದರೆ ನಾವು ಸ್ವೀಕರಿಸುವೆವು. ಈ ಬಗ್ಗೆ ನಮ್ಮ ಪವಾಡದ ದಾವೆ ಸುಳ್ಳಾಗಿದೆ ಎಂದು. ಆದರೆ ಶರತ್ತೇನೆಂದರೆ ಆ ತಾರೀಖಿನಿಂದ ಈ ಪತ್ರಿಕೆ ಪ್ರಕಟವಾಗಬೇಕು. ಸರಿಯಾದ ಅವಧಿಯಲ್ಲಿ ಇಪ್ಪತ್ತು ದಿವಸಗಳಲ್ಲಿ, ಅಷ್ಟೇ ಸಂಖ್ಯೆಯಲ್ಲಿ ಮತ್ತು ಅದೇ ಪಾಂಡಿತ್ಯದಲ್ಲಿ ಮತ್ತು ಅದೇ ವಿಷಯಗಳ ಬದಲಿಯಾಗಿ ಸಾಲುಗಳನ್ನು ಕಟ್ಟಿ ಮತ್ತು ಪ್ರಕಟಣೆ ನೀಡಿದರೆ, ಇಲ್ಲದಿದ್ದರೆ ಪತ್ರಿಕೆಯ ಮಾಧ್ಯಮದಿಂದ ತಮ್ಮ ವಿವಶತೆ ತೋರ್ಪಡಿಸಿದರೆ ಅದನ್ನು ಪ್ರಕಟಿಸಲಾಗುವುದು. ನಾವು ಮತ್ತೊಮ್ಮೆ ಸಾದರಪಡಿಸುತ್ತೇವೆ. ಈ ಕವನ ಸಾಲುಗಳನ್ನು ನಿಗದಿಪಡಿಸಿದ ತಾರೀಖಿನೊಳಗೆ ಅವರು ಸ್ಪರ್ಧಿಸಿದರೆ ಮತ್ತು ಜ್ಞಾನಿಗಳಿಂದ ತಮ್ಮ ಕವನ ಸಾಲುಗಳು ನಮ್ಮ ಕವನ ಸಾಲುಗಳಿಗೆ ಸಮಾನ ರೂಪದಲ್ಲಿದ್ದರೆ ಮತ್ತು ಸಂಖ್ಯೆಯಲ್ಲೂ ಸಮಾನವಾಗಿದ್ದರೆ, ನಿಸ್ಸಂಶಯವಾಗಿಯೂ ನಮ್ಮ ದಾವೆ ಸುಳ್ಳಾಗುವುದು. ಸಾಹಿತ್ಯದಲ್ಲಿ ಪವಾಡರೂಪತೆ ಮತ್ತು ಗದ್ಯ ಪದ್ಯದಲ್ಲೂ ಸಹ ಅಲ್ಲಾಹನ ಒಂದು ದೃಷ್ಟಾಂತವಾಗಿದೆ. ಅದು ನಮ್ಮ ಮಸೀಹ್ ಮೌಊದ್ ಆಗುವುದರ ಮೇಲೆ ಒಂದು ಸಾಕ್ಷ್ಯವಾಗಿದೆ. ಅಲ್ಲದೇ ನಾವು ಅಲ್ಲಾಹನ ಮೇಲೆ ಆಣೆ ಮಾಡಿ ವಾಗ್ದಾನ ಮಾಡುತ್ತೇವೆ. ಈ ಅವಧಿಯಲ್ಲಿ ಅದೇ ಸಂಖ್ಯೆಯ ಅನುಗುಣವಾಗಿ ಅದೇ ವಿಷಯಗಳಿಗೆ ಬದ್ಧವಾಗಿ ಅವರ ಕವನ ಸಾಲುಗಳು ವಿದ್ವಾಂಸರ ದೃಷ್ಟಿಯಲ್ಲಿ ನಮ್ಮ ಸಾಹಿತ್ಯಕ್ಕಿಂತಲೂ ಉತ್ತಮವೆಂದು ಸಾಬೀತಾದರೆ, ಇಬ್ಬರಿಗೂ ಒಂದೊಂದು ನೂರು ರೂಪಾಯಿಗಳು ಬಹುಮಾನ ನೀಡಲಾಗುವುದು.

**ಮಿಯಾಂ ಮೆಹರ್ ಅಲಿ ಸಾಹೇಬರು ಎದುರಾಳಿಯಾಗಿ ಸ್ಪರ್ಧಿಸಲು ಹೆದರಬೇಕಾಗಿಲ್ಲ. ಏಕೆಂದರೆ ನಮ್ಮ ಕವನ ಹಾಗೂ ಬರಹ ಕದ್ದು ಬರೆಯಲಾಗಿದೆ ಎಂದು ಅವರಿಗೆ ತಿಳಿದಿದೆ.**

ಸೈಯದ್‌ನಾ ಹಝ್ರತ್ ಮೌಊದ್(ಅ) ಇನ್ನೂ ವಿಶೇಷವಾಗಿ ಮಿಯಾ ಮೆಹರ್ ಅಲಿ ಸಾಹೇಬರು ಈ ಸ್ಪರ್ಧೆಯಿಂದ ಕಿಂಚಿತ್ತೂ ಹೆದರಬೇಕಾಗಿಲ್ಲ. ಏಕೆಂದರೆ ನಮ್ಮ ಕವನ ಹಾಗೂ ಬರಹ ಕಳ್ಳತನದಿಂದ ಬರೆಯಲಾದ ವಿಷಯ ಎಂದು ಅವರು ತಿಳಿದಿದ್ದಾರೆ. ಆದುದರಿಂದ ಖಚಿತ ರೂಪದಲ್ಲಿ ಅವರ ಪುಕ್ಕಲುತನ ದೂರವಾಗಬಹುದು. ಅಲ್ಲದೇ ನಮ್ಮ ಎದುರು ಧೈರ್ಯತಾಳಿ ಯಾವುದೇ ಅಧ್ಯಾಯದ ತಫ್ಸೀರ್ ಬರೆಯಬಹುದಾಗಿದೆ. ಏಕೆಂದರೆ ಈಗ ಅದು ತುಂಬಾ ಸರಳಗೊಂಡಿದೆ. ಇತರ ಜನರ ಬರಹಗಳನ್ನು ಕದಿಯಬಹುದು ಮತ್ತು ತಫ್ಸೀರ್ ಬರೆಯಬಹುದು. ಆದರೆ ಪ್ರಥಮವಾಗಿ ನಾವು ಅವರ ಸಾಳುಗಳ ಎದುರಿನಲ್ಲಿ ಆ ಸಜ್ಜನರ ಶೈಕ್ಷಣಿಕ ಅರ್ಹತೆ ನೋಡಬಯಸುತ್ತೇವೆ. ಆ ಅರ್ಹತೆಯಲ್ಲಿ ಪೀರ್ ಮೆಹರ್ ಅಲಿ ಸಾಹೇಬ ತನ್ನ ಪವಾಡ ತೋರಿಸಿದರೆ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಝಾತುಲ್ ಸಲಾಸಿಲ್ ಯುದ್ಧದಲ್ಲಿ ಮುಸ್ಲಿಮರ ವಿಜಯಕ್ಕೆ ಒಂದು ಪ್ರಮುಖ ಕಾರಣವೆಂದರೆ ಹಝ್ರತ್ ಅಬುಬಕರ್(ರ) ರವರು ಇರಾಖಿನ ರೈತರ ಬಗ್ಗೆ ರೂಪಿಸಿದ ನೀತಿ ಮತ್ತು ಅದನ್ನು ಖಲೀದ್(ರ) ಕಟ್ಟುನಿಟ್ಟಾಗಿ ಅನುಸರಿಸಿದರು. ಈ ನೀತಿಯಲ್ಲಿ ಅವರು ರೈತರನ್ನು ನಿಂದಿಸಿಲ್ಲ. ಅವರು ಎಲ್ಲಿ ನೆಲೆಸಿದರೂ ಅಲ್ಲಿಯೇ ಉಳಿಯಲು ಅವರು ಅವಕಾಶ ಮಾಡಿಕೊಟ್ಟರು ಮತ್ತು ಅಲ್ಪ ಪ್ರಮಾಣದ ಜಿಝ್ಯ ಹೊರತುಪಡಿಸಿ ಅವರಿಂದ ಯಾವುದೇ ರೀತಿಯ ಸುಲಿಗೆ ಅಥವಾ ತೆರಿಗೆಯನ್ನು ಸಂಗ್ರಹಿಸಲಿಲ್ಲ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22-07-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

إِيَّاكَ نَعْبُدُ وَإِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಇಂದಿನ ಖುತ್‌ಬದಲ್ಲಿ ಇರಾನಿಗಳ ವಿರುದ್ಧ ಹಝ್ರತ್ ಅಬೂಬಕರ್(ರ)ರವರು ನಡೆಸಿದ ಯುದ್ಧಗಳ ಬಗ್ಗೆ ವಿವರಿಸುವೆನು. ಹೀಗೆ ನಡೆಸಲಾದ ಒಂದು ಯುದ್ಧದ ಹೆಸರು ಝಾತುಲ್ ಸಲಾಸಿಲ್ ಅಥವಾ ಕಾಝಿಮ ಯುದ್ಧ ಎಂದಾಗಿದೆ. ಈ ಯುದ್ಧ ಹಿಜರಿ 12ರ ಮುಹರ್‍ರಂ ತಿಂಗಳಲ್ಲಿ ನಡೆಯಿತು. ಈ ಯುದ್ಧಕ್ಕೆ ಮೂರು ಹೆಸರುಗಳಿವೆ. ಜಂಗೆ ಝಾತುಲ್ ಸಲಾಸಿಲ್, ಜಂಗೇ ಕಾಝಿಮ ಮತ್ತು ಜಂಗೆ ಹಫೀರ್. ಜಂಗೆ ಝಾತುಲ್ ಸಲಾಸಿಲ್ ಎಂದರೆ ಸಂಕೋಲೆಗಳ ಯುದ್ಧ ಎಂದು ಅರ್ಥ. ಇರಾನಿ ಸೈನಿಕರನ್ನು ಒಬ್ಬರಿನ್ನೊಬ್ಬರೊಂದಿಗೆ ಸಂಕೋಲೆಗಳ ಮೂಲಕ ಜೋಡಿಸಲಾಗಿತ್ತು. ಸೈನ್ಯದಿಂದ ಯಾರೂ ಓಡಿ ಹೋಗದಿರಲಿ ಎಂದು ಹೀಗೆ ಮಾಡಲಾಗಿತ್ತು. ಝಾತುಲ್ ಸಲಾಸಿಲ್ ಯುದ್ಧದ ಈ ವರದಿಯನ್ನು ಕೆಲವು ಚರಿತ್ರೆಗಾರರು ಒಪ್ಪುವುದಿಲ್ಲ. ಈ ಯುದ್ಧವು ಮುಸ್ಲಿಮರ ಹಾಗೂ ಇರಾನೀಯರ ನಡುವೆ ಕಾಝಿಮದ ಸಮೀಪದ ಒಂದು ಜಾಗದಲ್ಲಿ ನಡೆದಿತ್ತು ಆದ್ದರಿಂದ ಈ ಯುದ್ಧವನ್ನು ಜಂಗೇ ಕಾಝಿಮ ಎಂದು ಸಹ ಕರೆಯಲಾಗುತ್ತದೆ. ಕಾಝಿಮವು ಬಸ್ರದಿಂದ ಬಹ್ರೈನ್‌ಗೆ ಹೋಗಬೇಕಾದಾಗ ಬಹ್ರೆ ಸೈಫುಲ್ ಬಹರ್ ಎಂಬ ಒಂದು ಊರಿನಲ್ಲಿದೆ.
(ಸೀರತ್ ಸಯ್ಯದುನಾ ಸಿದ್ದೀಖೆ ಅಕ್ಬರ್(ರ) ಉಸ್ತಾಝ್ ಉಮರ್ ಅಬುನ್ನಸರ್, ಪುಟ-664) (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ-2, ಪುಟ-239, ದಾರುಲ್ ಕುತುಬ್ ಇಲ್‌ಮಿಯ ಬೈರೂಥ್ 2003) (ಅಬೂಬಕರ್ ಸಿದ್ದೀಖ್ ಅಕ್ಬರ್(ರ), ಮುಹಮ್ಮದ್ ಹುಸೈನ್ ಹೈಕಲ್, ಅನುವಾದಕ ಶೇಖ್ ಮುಹಮ್ಮದ್ ಅಹ್ಮದ್ ಪಾನೀಪತಿ, ಪುಟ-272, ಇಲ್ಮ್ ವ ಇರ್‌ಫಾನ್ ಪಬ್ಲೀಶರ್ಸ್ ಲಾಹೋರ್ 2004) (ಮುಜಮುಲ್ ಬಲದಾನ್, ಸಂಪುಟ-4, ಪುಟ-488)

ಹಫೀರ್ ಪ್ರದೇಶದಲ್ಲಿ ಆಗಿದ್ದರಿಂದ ಈ ಯುದ್ಧವನ್ನು ಜಂಗೇ ಹಫೀರ್ ಎಂದು ಕರೆಯುತ್ತಾರೆ. (ಅಸ್ಸಿದ್ದೀಖ್(ರ), ಪುಟ-127, ಅಲೀ ಮುಹ್ಸಿನ್ ಸಿದ್ದೀಖಿ)

ಮುಸ್ಲಿಮರ ಕಡೆಯಿಂದ ಈ ಯುದ್ಧದಲ್ಲಿ ಸೇನಾಧಿಪತಿಯು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಆಗಿದ್ದರು ಮತ್ತು ಇರಾನೀಯರ ಕಡೆಯಿಂದ ಅವರ ಸೇನಾಧಿಪತಿಯ ಹೆಸರು ಹುರ್‌ಮುಝ್ ಆಗಿತ್ತು. ಈ ಯುದ್ಧದಲ್ಲಿ ಮುಸ್ಲಿಮ್ ಸೈನಿಕರ ಸಂಖ್ಯೆ 18 ಸಾವಿರವಾಗಿತ್ತು.
(ತಾರೀಖ್ ಅತ್ತಬರಿ, ಸಂಪುಟ-2, ಪುಟ-309, ದರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಕಳೆದ ಖುತ್‌ಬಲ್ಲಿ ಹೇಳಲಾಗಿತ್ತು ಇರಾನಿಗಳ ಸೇನಾಧಿಪತಿಯಾದ ಹುರ್‌ಮುಝ್ ಎಂಬವನು ಆ ಪ್ರದೇಶದ ಆಡಳಿತಾಧಿಕಾರಿಯೂ ಇರಾನಿಯರಲ್ಲಿ ಬಹಳ ಗೌರವಾರ್ಹನೂ ಕುಲೀನ ಕುಟುಂಬದವನೂ ಆಗಿದ್ದನು. ಇರಾನಿನ ಗಣ್ಯವ್ಯಕ್ತಿಯವರ ಅಭ್ಯಾಸವೇನಿತ್ತು ಎಂದರೆ ಅವರು ಸಾಮಾನ್ಯವಾದ ಟೋಪಿಗಳನ್ನು ಧರಿಸುತ್ತಿರಲಿಲ್ಲ ಬದಲಿಗೆ ಅವರು ಬಹಳ ಉತ್ತಮ ಹಾಗೂ ದುಬಾರಿ ಟೋಪಿಗಳನ್ನು ಧರಿಸುತ್ತಿದ್ದರು. ಮತ್ತು ಯಾರು ಎಷ್ಟರ ಮಟ್ಟಿಗೆ ಗೌರವಾನ್ವಿತನಾಗಿರುತ್ತಿದ್ದನು ಅಷ್ಟು ದುಬಾರಿ ಟೋಪಿಯನ್ನು ಧರಿಸುತ್ತಿದ್ದರು. ಎಲ್ಲರಕ್ಕಿಂತ ಉತ್ತಮ ಹಾಗೂ ದುಬಾರಿ ಟೋಪಿ ಎಂದರೆ ಒಂದು ಲಕ್ಷ ದಿರ್‌ಹಮ್‌ನ ಟೋಪಿ ಆಗಿತ್ತು ಎಂದು ಹೇಳಲಾಗುತ್ತದೆ ಅದನ್ನು ಕೇವಲ ಬಹಳ ಗೌರವಾನ್ವಿತ ವ್ಯಕ್ತಿಯರು ಮಾತ್ರ ಧರಿಸುತ್ತಿದ್ದರು. ಹುರ್‌ಮುಝ್ ಅಂತಹ ಟೋಪಿಯನ್ನು ಧರಿಸುತ್ತಿದ್ದನು ಅದರಿಂದ ಅವರ ಘನತೆಯ ಬಗ್ಗೆ ಅರಿವಾಗುತ್ತದೆ.

ಇರಾನಿಯರಲ್ಲಿ ಅವನ ಘನತೆ ಬಹಳ ಅಂಗೀಕರಿಸಲ್ಪಟ್ಟದ್ದಾಗಿತ್ತು. ಆದರೆ ಇರಾಖ್ ದೇಶದಲ್ಲಿ ವಾಸಿಸುತ್ತಿದ್ದ ಅರಬಿಗಳು ಅವನನ್ನು ಅತ್ಯಂತ ನಿಕೃಷ್ಟ ದೃಷ್ಟಿಯಿಂದ ನೋಡುತ್ತಿದ್ದರು. ಏಕೆಂದರೆ ಅವನು ಗಡಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಗಣ್ಯರಾದ ಜನರ ಮೇಲೆ ಬಹಳ ದೌರ್ಜನ್ಯ ಮಾಡುತ್ತಿದ್ದನು. ಮುಸ್ಲಿಮೇತರ ಅರಬಿಗಳು ಅವನನ್ನು ಎಷ್ಟು ದ್ವೇಷಿಸುತ್ತಿದ್ದರೆಂದರೆ, ಕೀಳು ವರ್ತನೆಯ ದುಸ್ವಭಾವದ ಕೆಟ್ಟ ಪ್ರಕೃತಿಯ ಮತ್ತು ಉಪಕಾರದ ಬಗ್ಗೆ ಸ್ಮರಣೆ ಇಲ್ಲದವರನ್ನು ಅವರು ಹುರ್‌ಮುಝ್ ಎಂದು ಕರೆಯುತ್ತಿದ್ದರು. (ಹಝ್ರತ್ ಅಬೂಬಕರ್ ಸಿದ್ದೀಖ್(ರ), ಹೈಕಲ್, ಪುಟ-269-270)

ಆದಾಗ್ಯೂ, ಹಝ್ರತ್ ಖಾಲಿದ್ ಬಿನ್ ವಲೀದ್(ರ) ಯಮಾಮದಿಂದ ಹೊರಡುವ ಮೊದಲು ಹುರ್‌ಮುಝ್‌ನಿಗೆ ಪತ್ರ ಬರೆದರು. ಅವರು ತಮ್ಮ ಪತ್ರದಲ್ಲಿ ಹೀಗೆ ಬರೆದರು: ಅಮ್ಮಾ ಬಅ್‌ದ್! ನೀನು ವಿಧೇಯನಾಗು, ನೀನು ಸುರಕ್ಷಿತವಾಗಿರುತ್ತೀರಿ, ಅಥವಾ ನಿಮಗಾಗಿ ಮತ್ತು ನಿಮ್ಮ ಜನರಿಗೆ ಸುರಕ್ಷತೆಯ ಖಾತರಿಯನ್ನು ಪಡೆದುಕೊಳ್ಳಿ ಮತ್ತು ಜಿಝ್ಯದ ಪಾವತಿಯನ್ನು ಸ್ವೀಕರಿಸಿ, ಇಲ್ಲದಿದ್ದರೆ ನಿಮ್ಮನ್ನು ಹೊರತುಪಡಿಸಿ ಬೇರೆ ಯಾರೂ ದೂಷಿಸುವುದಿಲ್ಲ.

ನೀನು ಜೀವವನ್ನು ಪ್ರೀತಿಸುವಂತೆ ಸಾವನ್ನು ಪ್ರೀತಿಸುವ ಜನರನ್ನು ನಾನು ನಿನ್ನ ವಿರುದ್ಧ ತಂದಿರುತ್ತೇನೆ.(ತಾರಿಖ್ ಅಲ್-ತಬರಿ, ಸಂಪುಟ-2, ಪುಟ-309, ದಾರ್ ಅಲ್-ಕಿತಾಬ್ ಅಲ್-ಉಲಮಿಯಾ, ಬೈರುತ್, 2012)

ಹಝ್ರತ್ ಖಾಲಿದ್(ರ) ಅವರ ಪತ್ರವು ಹುರ್‌ಮುಝ್‌ಗೆ ತಲುಪಿದಾಗ, ಅವನು ಅದನ್ನು ಇರಾನಿನ ದೊರೆ ಅರ್ದಶಿರ್‌ನಿಗೆ ಆ ಪತ್ರದ ಬಗ್ಗೆ ತಿಳಿಸಿ ಸೈನ್ಯವನ್ನು ಒಟ್ಟುಗೂಡಿಸಿದರು ಮತ್ತು ತಕ್ಷಣವೇ ಹಝ್ರತ್ ಖಾಲಿದ್(ರ) ಅವರನ್ನು ಎದುರಿಸಲು ಕಾಝಿಮಕ್ಕೆ ತಲುಪಿದನು ಮತ್ತು ಅವನು ಕುದುರೆಗಳೊಂದಿಗೆ ಮುನ್ನಡೆದನು, ಆದರೆ ಅವನು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ಕಾಣಲಿಲ್ಲ. ಮುಸ್ಲಿಮರ ಸೈನ್ಯ ಹಫೀರ್ ಎಂಬಲ್ಲಿ ಜಮಾಯಿಸಿದೆ ಎಂದು ಸಮಾಚಾರ ಲಭಿಸಿತು. ಆದುದರಿಂದ ಅವನು ಹಫೀರ್ ಕಡೆಗೆ ಹೊರಟನು. ಬಸ್ರಾದಿಂದ ಮಕ್ಕಾಗೆ ಹೋಗುವ ದಾರಿಯಲ್ಲಿ ಹಾಫಿರ್ ಮೊದಲ ನಿಲ್ದಾಣವಾಗಿತ್ತು. ಹಫೀರ್ ತಲಪಿದ ಕೂಡಲೆ ಹುರ್‌ಮುಝ್ ಸೈನಿಕರನ್ನು ಸಾಲುಗಟ್ಟಿ ನಿಲ್ಲಿಸಿದನು. ತನ್ನ ಎಡಬಲಗಳಲ್ಲಿ ಖುಬಾಝ್ ಮತ್ತು ಅನೂಶ್‌ಜಾನ್ ಎಂಬ ಇಬ್ಬರು ಸಹೋದರರನ್ನು ನಿಶ್ಚಯಿಸಿದನು. ಇರಾನಿ ಸೈನಿಕರು ಪರಸ್ಪರ ಸಂಕೋಲೆಗಳಿಂದ ಜೋಡಿಸಿ ಯಾರೂ ಓಡಿ ಹೋಗದಿರುವಂತೆ ಮಾಡಿದರು. ಇದನ್ನೇ ಈ ವರದಿಯಲ್ಲಿ ಹೇಳಲಾಗಿದ್ದು, ನೀವೆಲ್ಲರು ಶತ್ರುಗಳಿಗಾಗಿ ಸ್ವತಃ ತಮ್ಮನ್ನು ತಾವು ಸಂಕೋಲೆಗಳಿಂದ ಜೋಡಿಸಿಕೊಂಡಿದ್ದೀರಿ ಹೀಗೆ ಮಾಡಬೇಡಿ ಇದು ಬಹಳ ಕೆಟ್ಟ ಪತನವಾಗಿದೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ಅವರು, ಸರಪಳಿ ಹಾಕಿದ ಪರವಾಗಿದ್ದ ಅವರು, ನೀವು ಓಡಿಹೋಗಲು ಉದ್ದೇಶಿಸಿರುವ ಬಗ್ಗೆ ನಮಗೆ ಮಾಹಿತಿ ಬಂದಿದೆ. ಹುರ್‌ಮುಝ್‌ನು ಹಫೀರ್‌ಗೆ ಬರುವುದಾಗಿ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರಿಗೆ ಸಮಾಚಾರ ಲಭಿಸಿದಾಗ ಅವರು ತನ್ನ ಸೈನ್ಯವನ್ನು ಕಾಝಿಮದ ಕಡೆಗೆ ತಿರುಗಿಸಿದರು.

ಹರ್‌ಮುಝ್‌ಗೆ ಈ ವಿಷಯ ತಿಳಿದಾಗ, ಅವನು ತಕ್ಷಣವೇ

ಕಾಝಿಮಾಗೆ ತೆರಳಿ ಅಲ್ಲಿಯೇ ಮೊಕ್ಕಾಂ ಹೂಡಿದನು. ಹರ್ಮುಝ್ ಮತ್ತು ಅವನ ಸೈನ್ಯವು ಸಾಲಾಗಿ ನಿಂತಿತು ಮತ್ತು ನೀರನ್ನು ಸ್ವಾಧೀನಪಡಿಸಿಕೊಂಡಿತು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರು ಬಂದಾಗ ನೀರಿಲ್ಲದ ಜಾಗಕ್ಕೆ ಇಳಿಯಬೇಕಿತ್ತು. ಜನರು ಇದರ ಬಗ್ಗೆ ನಿಮಗೆ ದೂರು ನೀಡಿದರು. ಆಗ ಹಝ್ರತ್ ಖಾಲಿದ್(ರ)ರವರ ಡಂಗೂರ ಸಾರುವನು ಘೋಷಿಸಿದನು ಎಲ್ಲಾ ಜನರು ಇಳಿದು ತಮ್ಮ ವಸ್ತುಗಳನ್ನು ಕೆಳಗಿಳಿಸಿ ನೀರಿಗಾಗಿ ಶತ್ರುಗಳ ವಿರುದ್ಧ ಹೋರಾಡಬೇಕೆಂದು ಘೋಷಿಸಿದನು, ಏಕೆಂದರೆ ಅಲ್ಲಾಹನಆಣೆ! ನೀರನ್ನು ಎರಡು ಗುಂಪುಗಳಲ್ಲಿ ಅತ್ಯಂತ ದೃಢವಾದ ಮತ್ತು ಎರಡರಲ್ಲಿ ಅತ್ಯಂತ ಗೌರವಾನ್ವಿತ ಗುಂಪಿವರ ಸ್ವಾಧಿನವಾಗುವುದು. ತದನಂತರ ಸರಕುಗಳನ್ನು ಇಳಿಸಲಾಯಿತು. ಅಶ್ವಸೈನ್ಯವು ಸ್ಥಳದಲ್ಲಿ ಉಳಿಯಿತು. ಪದಾತಿಸೈನ್ಯವು ಮುಂದುವರಿದು ಶತ್ರುಗಳ ಮೇಲೆ ಆಕ್ರಮಣ ಮಾಡಿತು. ಎರಡೂ ಕಡೆಗಳಲ್ಲಿ ಯುದ್ಧ ಪ್ರಾರಂಭವಾದಾಗ, ಅಲ್ಲಾಹನು ಮೋಡವನ್ನು ಕಳುಹಿಸಿದನು. ಮುಸಲ್ಮಾನರ ಶ್ರೇಣಿಯ ಹಿಂದೆ ಮಳೆ ಬಿದ್ದಿತು. ಅದರಿಂದ ಮುಸ್ಲಿಮರು ಶಕ್ತಿ ಪಡೆದರು. ಹರ್ಮುಝ್ ಹಝ್ರತ್ ಖಾಲಿದ್(ರ) ಅವರಿಗೆ ಒಬ್ಬಂಟಿಯಾಗಿ ಯುದ್ಧವಾಡಲು ಆಹ್ವಾನಿಸುತ್ತೇನೆ ಮತ್ತು ನಾನು ಅವರನ್ನು ನನ್ನೊಂದಿಗೆ ಕಾರ್ಯನಿರತವಾಗಿರಿಸಿಕೊಳ್ಳುತ್ತೇನೆ, ಆಗ ನೀವು ಹಝ್ರತ್ ಖಾಲಿದ್(ರ) ಅವರ ಮೇಲೆ ರಹಸ್ಯವಾಗಿ ಆಕ್ರಮಣ ಮಾಡಬೇಕು ಎಂದು ಹೇಳಿದನು. ತದನಂತರ ಹರ್ಮುಝ್ ಮೈದಾನಕ್ಕೆ ಇಳಿದನು ಹಝ್ರತ್ ಖಾಲಿದ್(ರ) ತನ್ನ ಕುದುರೆಯಿಂದ ಕೆಳಗಿಳಿದರು. ಹರ್ಮುಝ್ ಕೂಡ ತನ್ನ ಕುದುರೆಯಿಂದ ಇಳಿದು ಹಝ್ರತ್ ಖಾಲಿದ್(ರ) ಅವರನ್ನು ಯುದ್ಧಕ್ಕೆ ಆಹ್ವಾನಿಸಿದನು. ಹಝ್ರತ್ ಖಾಲಿದ್(ರ) ಅವರ ಕಡೆಗೆ ನಡೆದರು ಮತ್ತು ಇಬ್ಬರೂ ಯುದ್ಧವಾಡಿದರು. ಎರಡೂ ಕಡೆಯಿಂದ ಹೊಡೆತಗಳು ಬಿದ್ದವು. ಹಝ್ರತ್ ಖಾಲಿದ್(ರ) ಹರ್ಮುಝ್ ಅನ್ನು ಸೋಲಿಸಿದರು. ಇದಕ್ಕೆ ಹರ್ಮುಝ್‌ನ ರಕ್ಷಣಾ ಪಡೆ ಹಝ್ರತ್ ಖಾಲಿದ್(ರ)ರವರ ಮೇಲೆ ವಿಶ್ವಾಸಘಾತುಕವಾಗಿ ದಾಳಿ ಮಾಡಿ ಅವರನ್ನು ಸುತ್ತುವರೆದಿತು. ಈ ರೀತಿ ಒಬ್ಬರ ಮೇಲೊಬ್ಬರು ಯುದ್ಧವಾಡಿಕೊಂಡಾಗ, ಇತರರು ದಾಳಿ ಮಾಡುವುದಿಲ್ಲ, ಆದರೆ ಅವನ ಸೈನ್ಯವು ಅವರ ಮೇಲೆ ದಾಳಿ ಮಾಡಿತು. ಇದರ ಹೊರತಾಗಿಯೂ, ಹಝ್ರತ್ ಖಾಲಿದ್(ರ) ಹರ್ಮುಝ್ ಕೆಲಸವನ್ನು ಪೂರ್ಣಗೊಳಿಸಿದರು.

ಇರಾನಿಯನ್ನರ ಈ ದ್ರೋಹವನ್ನು ಹಝ್ರತ್ ಕಾಕ್‌ಕಾಅ್ ಬಿನ್ ಅಮ್ರೋ(ರ) ನೋಡಿದ ತಕ್ಷಣ, ಅವರು ಹರ್ಮುಝ್‌ನ ರಕ್ಷಣಾ ಪಡೆಯ ಮೇಲೆ ದಾಳಿ ಮಾಡಿದರು ಮತ್ತು ಅವರನ್ನು ಸುತ್ತುವರೆದು ಅವನನ್ನು ಕೊಂದರು. ಇರಾನಿಯನ್ನರು ಸೋಲಿಸಲ್ಪಟ್ಟರು ಮತ್ತು ಅವರು ಓಡಿಹೋದರು. ಓಡಿಹೋದವರಲ್ಲಿ ಕುಬಾಝ್ ಮತ್ತು ಅನುಷಾಜಾನ್ ಕೂಡ ಸೇರಿದ್ದಾರೆ. ಮುಸ್ಲಿಮರು ರಾತ್ರಿಯ ಕತ್ತಲೆಯಲ್ಲಿ ಇರಾನಿಯನ್ನರನ್ನು ಹಿಂಬಾಲಿಸಿದರು ಮತ್ತು ಪ್ರಸ್ತುತ ಕಾಲದಲ್ಲಿ ಬಸ್ರ ಇರುವ ಯೂಫ್ರಟಿಸ್ ನದಿಯ ದೊಡ್ಡ ಸೇತುವೆಯವರೆಗೂ ಅವರನ್ನು ಹಿಂಬಾಲಿಸಿದರು. ಯುದ್ಧದ ಕೊನೆಯಲ್ಲಿ, ಹಝ್ರತ್ ಖಾಲಿದ್(ರ) ಅವರು ಯುದ್ಧದ ಸಂಪತ್ತನ್ನು ಜಮಾಯಿಸಿದರು. ಇದರಲ್ಲಿ ಒಂದು ಒಂಟೆಯ ಮೇಲೆ ಹೇರುವಷ್ಟು ಸಮಾನವಾದ ಸರಪಳಿಗಳನ್ನು ಸಹ ಹೊಂದಿತ್ತು. ಅದರ ತೂಕ ಒಂದು ಸಾವಿರ ರತಲ್‌ಗಳು, ಅಂದರೆ ಸುಮಾರು ಮುನ್ನೂರ ಎಪ್ಪತ್ತೈದು ಕಿಲೋಗ್ರಾಂಗಳಷ್ಟು ಸರಪಳಿಗಳಿತ್ತು. ಹಝ್ರತ್ ಅಬೂಬಕರ್(ರ) ಅವರಿಗೆ ಕಳುಹಿಸಲಾದ ಯುದ್ಧದ ಸಂಪತ್ತು ಒಂದು ಲಕ್ಷ ದಿರ್ಹಮ್‌ಗಳ ಮೌಲ್ಯದ ಹರ್ಮುಝ್‌ನ ಟೋಪಿಯನ್ನು ಒಳಗೊಂಡಿತ್ತು ಮತ್ತು ಅದರಲ್ಲಿ ಆಭರಣಗಳನ್ನು ಹೊದಿಸಲಾಗಿತ್ತು. ಹಝ್ರತ್ ಅಬುಬಕರ್(ರ) ಈ ಟೋಪಿಯನ್ನು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರಿಗೆ ನೀಡಿದರು. ಹಝ್ರತ್ ಖಾಲಿದ್(ರ) ವಿಜಯದ ಸುವಾರ್ತೆ, ಯುದ್ಧದ ಸಂಪತ್ತಿನಿಂದ ಖುಮ್ಸ್ ಮತ್ತು ಒಂದು ಆನೆಯನ್ನು ಮದೀನಾಕ್ಕೆ ಕಳುಹಿಸಿದರು ಮತ್ತು ಎಲ್ಲೆಡೆ ಇಸ್ಲಾಮಿಕ್ ಸೈನ್ಯದ ವಿಜಯವನ್ನು ಘೋಷಿಸಿದರು. ಜಿರ್ ಬಿನ್ ಕುಲೈಬ್ ಖುಮ್ಸ್ ಆನೆಯೊಂದಿಗೆ ಮದೀನಕ್ಕೆ ತಲುಪಿದರು. ಮದೀನಾದ ಜನರು ಮೊದಲು ಆನೆಯನ್ನು ನೋಡಿರಲಿಲ್ಲ. ಮದೀನಾದ ಜನರನ್ನು ಬಿಡಿ, ಅಬ್ರಹಾದ ಆನೆಗಳನ್ನು ಹೊರತುಪಡಿಸಿ ಅರೇಬಿಯಾದ ಯಾವುದೇ ನಿವಾಸಿಗಳು ಆನೆಯನ್ನು ನೋಡಿರಲಿಲ್ಲ. ಇದನ್ನು ಜನರಿಗೆ ತೋರಿಸಲು ಊರಿನಲ್ಲೆಲ್ಲಾ ಗಸ್ತು ತಿರುಗಿದಾಗ ಈ ಆನೆಯನ್ನು ನೋಡಿ ಮುದುಕಿಯರು ಬಹಳ ಆಶ್ಚರ್ಯಪಟ್ಟು ನಾವೇನು ಅಲ್ಲಹನ ಸೃಷ್ಟಿಯನ್ನೇ ನೋಡುತ್ತಿದ್ದೇವೆಯೇ? ಎಂದು ಹೇಳತೊಡಗಿದರು. ಅವರು ಇದನ್ನು ಏನೋ ನಕಲಿ ಇರಬಹುದು ಎಂದು ಭಾವಿಸಬೇಕು. ಹಝ್ರತ್ ಅಬುಬಕರ್(ರ) ಅವರು ಈ ಆನೆಯನ್ನು ಝಿರ್ ಜೊತೆಗೆ ಹಝ್ರತ್ ಖಾಲಿದ್(ರ) ಅವರ ಬಳಿಗೆ ಕಳುಹಿಸಿದರು.

(ತಾರೀಖ್ ಅತ್ತಬರಿ, ಸಂಪುಟ–2, ಪುಟ–309–310, ದಾರುಲ್ ಕುತುಬ ಇಲ್‌ಮಿಯ ಬೈರೂತ್) (ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ), ಡಾ॥ ಅಲಿ ಮುಹಮ್ಮದ್ ಸಲಾಬಿ, ಪುಟ–404–405) (ಹಝ್ರತ್ ಅಬು ಬಕರ್ ಸಿದ್ದೀಕ್ ಅಕ್ಬರ್(ರ), ಹೈಕಲ್ ನಿಂದ, ಪುಟಗಳು 271 ರಿಂದ 273) (ಮುಜಮುಲ್ ಬಲದಾನ್, ಸಂಪುಟ–2, ಪುಟ–319, ದಾರ್ ಅಲ್–ಕಿತಾಬ್ ಅಲ್–ಇಲಾಮಿಯಾ , ಬೈರುತ್, ಲೆಬನಾನ್) (ರತಲ್ ಪದದ ಅಡಿಯಲ್ಲಿ ಹದೀಸ್ ನಿಘಂಟುಗಳು, ಸಂಪುಟ–2, ಪುಟ–121)

ಈ ಯುದ್ಧದಲ್ಲಿ ಮುಸ್ಲಿಮರ ವಿಜಯಕ್ಕೆ ಒಂದು ಪ್ರಮುಖ ಕಾರಣವೆಂದರೆ ಹಝ್ರತ್ ಅಬುಬಕರ್(ರ) ರವರು ಇರಾಖಿನ ರೈತರ ಬಗ್ಗೆ ರೂಪಿಸಿದ ನೀತಿ ಮತ್ತು ಅದನ್ನು ಖಲೀದ್(ರ) ಕಟ್ಟುನಿಟ್ಟಾಗಿ ಅನುಸರಿಸಿದರು. ಈ ನೀತಿಯಲ್ಲಿ ಅವರು ರೈತರನ್ನು ನಿಂದಿಸಿಲ್ಲ. ಅವರು ಎಲ್ಲಿ ನೆಲೆಸಿದರೂ ಅಲ್ಲಿಯೇ ಉಳಿಯಲು ಅವರು ಅವಕಾಶ ಮಾಡಿಕೊಟ್ಟರು ಮತ್ತು ಅಲ್ಪ ಪ್ರಮಾಣದ ಜಿಝ್ಯ ಹೊರತುಪಡಿಸಿ ಅವರಿಂದ ಯಾವುದೇ ರೀತಿಯ ಸುಲಿಗೆ ಅಥವಾ ತೆರಿಗೆಯನ್ನು ಸಂಗ್ರಹಿಸಲಿಲ್ಲ.(ಹಝ್ರತ್ ಅಬೂಬಕರ್ ಸಿದ್ದೀಖ್ ಅಕ್ಬರ್(ರ) ಮುಹಮ್ಮದ್ ಹುಸೈನ್ ಹೈಕಲ್, ಪುಟ–272, ಅನುವಾದಕ ಶೇಖ್ ಮುಹಮ್ಮದ್ ಅಹ್ಮದ್ ಪಾನಿಪತಿ, ಇಲ್ಮ್ ವ ಇರ್ಫಾನ್ ಪಬ್ಲಿಶರ್ಸ್, ಲಾಹೋರ್ 2004)

ಝಾತುಲ್–ಸಲಾಸಿಲ್ ಯುದ್ಧದಲ್ಲಿ ಸೇರಿದ ಕುದುರೆ ಸವಾರನಿಗೆ ಒಂದು ಸಾವಿರ ದಿರ್ಹಮ್‌ಗಳ ಪಾಲು ಮತ್ತು ಕಾಲುದಾರನಿಗೆ ಅದರಲ್ಲಿ ಮೂರನೇ ಒಂದು ಭಾಗವನ್ನು ನೀಡಲಾಯಿತು. (ತಾರಿಖ್ ಅಲ್–ತಬರಿ, ಸಂಪುಟ–2, ಪುಟ–311, ದಾರ್ ಅಲ್–ಕಿತಾಬ್ ಅಲ್–ಉಲಮಿಯಾ, ಬೈರೂತ್, 2012)

ಕಾಝಿಮಾ ಯುದ್ಧವು ದೂರಗಾಮಿ ಪರಿಣಾಮಗಳನ್ನು ಬೀರಿತು.

ಈ ಯುದ್ಧವು ಮುಸ್ಲಿಮರ ಕಣ್ಣುಗಳನ್ನು ತೆರೆಯಿತು ಮತ್ತು ದೀರ್ಘಕಾಲದವರೆಗೆ ಅವರ ಖ್ಯಾತಿಯನ್ನು ಕೇಳಿದ ಇರಾನಿಯನ್ನರು ತಮ್ಮ ಪೂರ್ಣ ಶಕ್ತಿಯ ಹೊರತಾಗಿಯೂ ತಮ್ಮ ಅತ್ಯಲ್ಪ ಸೈನ್ಯವನ್ನು ಎದುರಿಸಲು ಸಾಧ್ಯವಾಗಲಿಲ್ಲ ಎಂದು ಅವರು ನೋಡಿದರು. ಈ ಯುದ್ಧದಲ್ಲಿ ಅವರು ಗಳಿಸಿದ ಸಂಪತ್ತನ್ನು ಅವರು ಊಹಿಸಲೂ ಸಾಧ್ಯವಾಗಲಿಲ್ಲ. (ಹಝ್ರತ್ ಅಬೂಬಕರ್ ಸಿದ್ದೀಖ್ ಅಕ್ಬರ್(ರ) ಮುಹಮ್ಮದ್ ಹುಸೈನ್ ಹೈಕಲ್, ಪುಟ–272, ಅನುವಾದ ಶೇಖ್ ಮಯಹಮ್ಮದ್ ಹುಸೈನ್ ಹೈಕಲ್ ಪಾನಿ ಪತಿ, ಇಲ್ಮ್ ವ ಇರ್ಫಾನ್ ಪಬ್ಲೀಷರ್ಸ್ ಲಾಹೋರ್ 2004)

ಇನ್ನು ಅಬ್ಲ ಯುದ್ಧದ ವಿವರಣೆ: ಇದು ಹಿಜರಿ 12ರಲ್ಲಿ ನಡೆಯಿತು. ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್(ರ)ರಿಗೆ ಇರಾಖ್‌ನಲ್ಲಿ ಯುದ್ಧವನ್ನು ಅಬ್ಲದಿಂದ ಪ್ರಾರಂಭಿಸಬೇಕೆಂದು ನಿರ್ದೇಶನ ನೀಡಿದ್ದರು. ಪರ್ಷಿಯನ್ ಗಲ್ಫ್‌ನ ಬದಿಯಲ್ಲಿದ್ದ ಅಬ್ಲ ಸಮುದ್ರದ ಕಿನಾರೆಯಲ್ಲಿತ್ತು. ಇರಾಖ್‌ನಿಂದ ಸಿಂಧ್ ಮತ್ತು ಹಿಂದೂಸ್ಥಾನದ ಇತರ ಭಾಗಗಳಿಗೆ ಸಂಚಾರ ಮಾಡುತ್ತಿದ್ದ ವ್ಯಾಪಾರಿಗಳ ತಂಡ ಮೊದಲು ಅಬ್ಲದಲ್ಲಿ ತಂಗುತ್ತಿತ್ತು. ಅಬ್ಲವನ್ನು ಜಯಿಸಿದ ಬಗ್ಗೆ ಎರಡು ವರದಿಗಳಿವೆ. ಒಂದು ವರದಿ ಹೀಗೆ: ಹಝ್ರತ್ ಅಬೂಬಕರ್(ರ)ರವರ ಆಡಳಿತೆಯ ಕಾಲದಲ್ಲಿ ಮುಸ್ಲಿಮರು ಅಬ್ಲವನ್ನು ಸ್ವಾಧೀನಪಡಿಸಿದರು. ಆದರೆ ಅನಂತರ ಅದನ್ನು ಇರಾನಿಗಳು ವಶಪಡಿಸಿಕೊಂಡರು. ನಂತರ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಕಾಲದಲ್ಲಿ ಅಬ್ಲ ಪೂರ್ಣವಾಗಿ ಮುಸ್ಲಿಮರ ಸ್ವಾಧೀನಕ್ಕೆ ಬಂತು. ಇನ್ನೊಂದು ವರದಿ ಎಂದರೆ ಇದನ್ನು ಹಝ್ರತ್ ಉಮರ್(ರ)ರವರ ಕಾಲಘಟ್ಟದಲ್ಲಿ ಸ್ವಾಧೀನಪಡಿಸಲಾಯಿತು. (ಹಝ್ರತ್ ಅಬೂಬಕರ್ ಸಿದ್ದೀಖ್ ಅಕ್ಬರ್(ರ), ಹೈಕಲ್, ಪುಟ–269)

ಆದಾಗ್ಯೂ, ಅಲ್ಲಮ ತಬರಿಯವರು ತಮ್ಮ ಪುಸ್ತಕದಲ್ಲಿ ಹಝ್ರತ್ ಅಬುಬಕರ್(ರ) ಅವರ ಖಲೀಫತ್ ಕಾಲದಲ್ಲಿ ಈ ಯುದ್ಧವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಿದ್ದಾರೆ, ಆದರೆ ನಂತರ ಅವರು ಹಝ್ರತ್ ಅಬುಬಕರ್(ರ) ಅವರ ಖಲೀಫತ್ ಕಾಲದಲ್ಲಿ ಉಬುಲ್ಲದ ವಿಜಯದ ಘಟನೆಯು ಸಾಮಾನ್ಯ ಜೀವನಚರಿತ್ರೆಕಾರರು ಮತ್ತು ಅಧಿಕೃತ ವರದಿಗಳಿಗೆ ವಿರುದ್ಧವಾಗಿದೆ ಎಂದು ಬರೆಯುತ್ತಾರೆ. ಹಝ್ರತ್ ಉಮರ್(ರ) ಅವರ ಕಾಲದಲ್ಲಿ ಹದಿನಾಲ್ಕು ಹಿಜ್ರಿಯಲ್ಲಿ ಉಬುಲ್ಲಾವನ್ನು ಹಝ್ರತ್ ಉತ್ಬಾ ಬಿನ್ ಘಜ್ವಾನ್ ನಿರ್ವಹಿಸಿದರು. (ತಾರಿಖ್ ಅಲ್–ತಬರಿ, ಸಂಪುಟ–2, ಪುಟ–310, ದಾರ್ ಅಲ್–ಕುತುಬ್ ಇಲ್‌ಮಿಯ ಬೈರೂತ್, 2012)

ಇತಿಹಾಸದ ಇತರ ಪುಸ್ತಕಗಳಲ್ಲಿ, ಉಬುಲ್ಲಾ ಯುದ್ಧವನ್ನು ಈ ರೀತಿ ಉಲ್ಲೇಖಿಸಲಾಗಿದೆ. ಕೆಲವು ಇತಿಹಾಸಕಾರರು ಇದು ಹಝ್ರತ್

ಅಬುಬಕರ್(ರ) ಖಿಲಾಫತ್ ಕಾಲದಲ್ಲಿ ಮೊದಲ ಬಾರಿಗೆ ಸಂಭವಿಸಿದೆ ಎಂದು ಹೇಳುತ್ತಾರೆ, ಮತ್ತು ಕೆಲವರು ಅದನ್ನು ನಿರಾಕರಿಸುತ್ತಾರೆ, ಈ ಯುದ್ಧವು ಹಝ್ರತ್ ಅಬುಬಕರ್(ರ)ರವರ ಖಿಲಾಫತ್ ಕಾಲದಲ್ಲಿ ನಡೆದಿಲ್ಲ, ಆದರೆ ಉಮರ್(ರ) ಅವರ ಖಿಲಾಫತ್ ಕಾಲದಲ್ಲಿ ನಡೆಯಿತು ಎಂದು ಬರೆದರು ಆದರೆ ಇತಿಹಾಸದ ಪುಸ್ತಕಗಳಲ್ಲಿ ಹಝ್ರತ್ ಅಬುಬಕರ್(ರ) ಮತ್ತು ಹಝ್ರತ್ ಉಮರ್(ರ) ಮತ್ತು ಇಬ್ಬರ ಅನುಗ್ರಹದಾಯಕ ಯುಗದಲ್ಲಿ, ಉಬುಲ್ಲಾ ಯುದ್ಧ ಮತ್ತು ಉಬುಲ್ಲಾ ವಿಜಯವನ್ನು ಉಲ್ಲೇಖಿಸಲಾಗಿದೆ. ಹಝ್ರತ್ ಅಬುಬಕರ್(ರ) ಖಿಲಾಫತ್ ಕಾಲದಲ್ಲಿ ಇದನ್ನು ಮೊದಲ ಬಾರಿಗೆ ಸ್ವಾಧೀನಪಡಿಸಿಕೊಳ್ಳಲಾಯಿತು ಎಂದು ತಿಳಿಯುತ್ತದೆ, ಆದರೆ ನಂತರ ಇರಾನಿಯನ್ನರ ನೌಕಾಪಡೆಯ ನೆರವಿನಿಂದ ಉಬುಲ್ಲಾದ ಜನರು ಬಂಡಾಯವೆದ್ದರು ಮತ್ತು ಸ್ವಾತಂತ್ರ್ಯವನ್ನು ಪಡೆದರು. ನಂತರ ಹಝ್ರತ್ ಉಮರ್(ರ) ಅವರ ಅನುಗ್ರಹದಾಯಕ ಯುಗದಲ್ಲಿ ಅದನ್ನು ಮತ್ತೆ ಸ್ವಾಧಿನಪಡಿಸಿಕೊಳ್ಳಲಾಯಿತು. (ಅಸ್ಸಿದ್ದೀಖ್(ರ), ಪ್ರೊ. ಅಲಿ ಮುಹ್ಸಿನ್ ಸಿದ್ದೀಖಿ, ಪುಟ–128)

ಆದಾಗ್ಯೂ, ಉಬುಲ್ಲಾ ಯುದ್ಧದ ವಿವರಗಳು ಕೆಳಕಂಡಂತಿವೆ: ಝಾತುಲ್–ಸಲಾಸಿಲ್ ಕದನದ ಕೊನೆಯಲ್ಲಿ, ಹಝ್ರತ್ ಖಾಲಿದ್ ಬಿನ್ ವಲೀದ್(ರ) ಇರಾನಿಯನ್ನರ ಸೋಲಿಸಲ್ಪಟ್ಟ ಸೈನ್ಯದ ಅನ್ವೇಷಣೆಯಲ್ಲಿ ಹಝ್ರತ್ ಮುಸನ್ನು ಕಳುಹಿಸಿದನು ಮತ್ತು ಅದೇ ಸಮಯದಲ್ಲಿ ಹಝ್ರತ್ ಮಅ್ಖಲ್(ರ) ಅವರನ್ನು ಉಬುಲ್ಲಾಗೆ ಕಳುಹಿಸಿದರು, ಉಬುಲ್ಲಾಗೆ ತಲುಪಿ ಯುದ್ಧದ ಸಂಪತ್ತನ್ನು ಸಂಗ್ರಹಿಸಲು ಮತ್ತು ಖೈದಿಗಳನ್ನು ಬಂಧಿಸಲು ಆದೇಶೀಸಿದರು. ಹೀಗೆ ಮಅ್ಕಲ್ ಅಲ್ಲಿಂದ ಹೊರಟು ಉಬ್ಲಾವನ್ನು ತಲುಪಿ ಯುದ್ಧದ ಸಂಪತ್ತನ್ನು ಸಂಗ್ರಹಿಸಿ ಹಾಗೂ ಖೈದಿಗಳನ್ನು ಬಂಧಿಸಿದರು. (ತಾರಿಖ್ ಅಲ್–ತಬರಿ, ಸಂಪುಟ–2, ಪುಟ–310)

ನಂತರ, ಹಝ್ರತ್ ಉಮರ್(ರ) ಅವರ ಖಿಲಾಫತ್ ಕಾಲಘಟ್ಟದಲ್ಲಿ ಅದರ ವಿಜಯುದ ವಿವರಗಳು ಹೀಗಿವೆ: ಹಝ್ರತ್ ಉಮರ್(ರ) ಹಝ್ರತ್ ಉತ್ಬಾ ಬಿನ್ ಘಜ್ವಾನ್(ರ) ಅವರನ್ನು ಹದಿನಾಲ್ಕು ಅಥವಾ ಹದಿನಾರು ಹಿಜ್ರಿಯಲ್ಲಿ ಬಸ್ರಾಗೆ ಕಳುಹಿಸಿದರು. ಅಲ್ಲಿ ಹಝ್ರತ್ ಉತ್ಬಾ(ರ) ಒಂದು ತಿಂಗಳು ತಂಗಿದ್ದರು. ಉಬುಲ್ಲಾದ ಜನರು ಅವರೊಂದಿಗೆ ಹೋರಾಡಲು ಬಂದರು. ಇವರು ಐನೂರು ವಿದೇಶಿ ಸೈನಿಕರಾಗಿದ್ದು ಉಬುಲ್ಲಾದ ರಕ್ಷಣೆಯ ಹೊಣೆ ಹೊತ್ತಿದ್ದರು. ಇರಾನಿಯನ್ನರು ನಗರವನ್ನು ಪ್ರವೇಶಿಸುವವರೆಗೂ ಹಝ್ರತ್ ಉತ್ಬಾ(ರ) ಈ ಜನರೊಂದಿಗೆ ಹೋರಾಡಿದರು ಮತ್ತು ಅವರನ್ನು ಸೋಲಿಸಿದರು ಮತ್ತು ಹಝ್ರತ್ ಉತ್ಬಾ(ರ) ಅವರು ತಮ್ಮ ಸೈನ್ಯಕ್ಕೆ ಮರಳಿದರು. ಅಲ್ಲಾಹನು ಪರ್ಷಿಯನ್ನರ ಹೃದಯದಲ್ಲಿ ಭಯವನ್ನು ಹುಟ್ಟುಹಾಕಿದನು, ಅವರು ನಗರವನ್ನು ತೊರೆದರು ಮತ್ತು ಕೆಲವು ಸಾಮಗ್ರಿಗಳೊಂದಿಗೆ ದೋಣಿಗಳಲ್ಲಿ ಕುಳಿತು ನದಿಯನ್ನು ದಾಟಿದರು. ಹೀಗಾಗಿ ಇಡೀ ನಗರವೇ ಖಾಲಿಯಾಯಿತು. ಮುಸ್ಲಿಮರು ನಗರವನ್ನು ಪ್ರವೇಶಿಸಿದರು, ಅಲ್ಲಿ ಮುಸ್ಲಿಮರು ಬಹಳಷ್ಟು ಸರಕುಗಳು, ಶಸ್ತ್ರಾಸ್ತ್ರಗಳು ಮತ್ತು ಇತರ ವಸ್ತುಗಳನ್ನು ಪಡೆದರು ಮತ್ತು ಕೈದಿಗಳನ್ನು ಸಹ ಪಡೆದರು. ಈ ಎಲ್ಲಾ ಸರಕುಗಳ ಖುಮ್ಸ್ ಅನ್ನು ಹೊರತೆಗೆಯಲಾಯಿತು ಮತ್ತು ಉಳಿದ ಸಂಪತ್ತನ್ನು (ಹೋರಾಡಿದವರಿಗೆ) ಮುಜಾಹಿದೀನ್‌ಗಳಿಗೆ ಹಂಚಲಾಯಿತು. ಮುಸಲ್ಮಾನರ ಸಂಖ್ಯೆ ಮುನ್ನೂರಾಗಿತ್ತು.
(ಅಲ್–ಕಾಮಿಲ್ ಫಿ ಅಲ್–ತಾರಿಖ್, ಸಂಪುಟ–2, ಪುಟ–335, ದಾರ್ ಅಲ್–ಕಿತಾಬ್ ಅಲ್–ಇಲ್ಮಿಯಾ ಬೈರುತ್ 2006)

ಇನ್ನೊಂದು ಯುದ್ಧ ಜಂಗೇ ಮಝಾರ್. ಇದು ಸಹ ಹಿಜರಿ 12ರಲ್ಲಿ ನಡೆದ ಯುದ್ಧವಾಗಿದೆ. (ತಾರೀಖ್ ಅತ್ತಬರಿ, ಸಂಘುಟ–2, ಪುಟ–311, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2012)

ಮಝಾರ್ ಎಂಬುದು ಮೇಸನ್ ಪಟ್ಟಣವಾಗಿದೆ. ಮಝಾರ್ ಮತ್ತು ಬಸ್ರಾ ನಡುವಿನ ಅಂತರವು ನಾಲ್ಕು ದಿನಗಳ ಪ್ರಯಾಣಕ್ಕೆ ಸಮಾನವಾಗಿದೆ.(ಮುಜಮುಲ್ ಬಲದಾನ್, ಸಂಪುಟ–5, ಪುಟ–104, ದಆರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್)

ಈ ಘಟನೆಯ ದಿನದಂದು, ಸಫರ್ ತಿಂಗಳು ಬಂದಿದೆ ಮತ್ತು ನದಿಗಳು ಸೇರುವ ಸ್ಥಳದಲ್ಲಿ ಪ್ರತಿಯೊಬ್ಬ ಕ್ರೂರ ಮತ್ತು ದಂಗೆಕೋರರನ್ನು ಕೊಲ್ಲಲಾಗುತ್ತದೆ ಎಂಬ ನುಡಿಗಟ್ಟು ಜನರ ನಾಲಿಗೆಯಲ್ಲಿ ಇತ್ತು. ಜಂಗೇ ಸಲಾಸಿಲ್ ಸಂದರ್ಭದಲ್ಲಿ ಹುರ್ಮುಝ್ ತನಗೆ ಸಹಾಯಕ ಸೈನ್ಯವನ್ನು ಕಳುಹಿಸಬೇಕೆಂದು ಇರಾನಿನ ದೊರೆಯನ್ನು ಅಪೇಕ್ಷಿಸಿದಾಗ ಇರಾನಿನ ದೊರೆ ಖಾರಿನ್ ನೇತೃತ್ವದಲ್ಲಿ ಒಂದು ಸೈನ್ಯವನ್ನು ಕಳುಹಿಸಿದ್ದನು. ಆದರೆ ಆ ಸೈನ್ಯ ಮಝಾರ್ ಎಂಬ ಸ್ಥಳಕ್ಕೆ ತಲಪಿದಾಗ ಹುರ್ಮುಝ್ ಸೋತು ಕೊಲ್ಲಲ್ಪಟ್ಟನೆಂಬ ವರದಿ ತಲಪಿತು. ಹುರ್ಮುಝ್‌ನ ಸೋತು ಹೋದ ಸೈನಿಕರು ಸಹ ಖಾರಿನ್ ಬಳಿಗೆ ತಲಪಿದರು.

ಮತ್ತು ಅವರಲ್ಲಿ ಕೆಲವು ಸೈನಿಕರು ಇತರ ಪಡೆಗಳ ಸೈನಿಕರಿಗೆ ಹೇಳಿದರು, ನೀವು ಇಂದು ವಿಭಜನೆಯಾದರೆ, ನೀವು ಮತ್ತೆ ಸಂಗ್ರಹಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತ್ವರಿತ ಪುನರಾಗಮನಕ್ಕಾಗಿ ಒಟ್ಟಿಗೆ ಸೇರಿಕೊಳ್ಳಿ. ಓಡುತ್ತಿದ್ದ ಸೈನ್ಯ ಮತ್ತು ಬರುತ್ತಿರುವ ಹೊಸ ಬಲವರ್ಧನೆಗಳು ಅಥವಾ ಇರಾನ್‌ನಿಂದ ಬರುತ್ತಿರುವ ಹೊಸ ಸೈನ್ಯವು ಭೇಟಿಯಾಯಿತು ಮತ್ತು ಇಬ್ಬರೂ ಯುದ್ಧವಾಗಬೇಕೆಂದು ಪರಸ್ಪರ ಪ್ರೋತ್ಸಾಹಿಸಿದರು. ರಾಜನ ಬೆಂಬಲದಿಂದ ಹೊಸ ಸೈನ್ಯ ಬಂದಿದೆ ಎಂದು ಓಡಿದವರು ಹೇಳಿದರು. ಮತ್ತು ನಮ್ಮೊಂದಿಗೆ ಅವನ ಕಮಾಂಡರ್ ಖಾರಿನ್ ಇದ್ದಾನೆ ಅಲ್ಲಾಹನು ನಮಗೆ ಜಯ ನೀಡುವನು ಮತ್ತು ನಮ್ಮ ಶತ್ರುಗಳಿಂದ ನಮ್ಮನ್ನು ರಕ್ಷಿಸುವ ಸಾಧ್ಯತೆಯಿದೆ ಮತ್ತು ನಾವು ನಮ್ಮ ನಷ್ಟಗಳಿಗೆ ಸ್ವಲ್ಪ ಪರಿಹಾರವನ್ನು ಮಾಡಿಕೊಳ್ಳಬಹುದು. ಆದ್ದರಿಂದ ಅವರು ಹಾಗೆಯೇ ಮಾಡಿದರು ಮತ್ತು ಅವರು ಮಝಾರಿನಲ್ಲಿ ತಂಗಿದರು. ಝಾತುಲ್–ಸಲಾಸಿಲ್ ಕದನದಲ್ಲಿ ತಪ್ಪಿಸಿಕೊಂಡ ಕುಬಾಝ್ ಮತ್ತು ಅನುಷಾಜನ್ ಅವರನ್ನು ಖಾರಿನ್ ಮುಂಚೂಣಿ ಪಡೆಯಾಗಿ ನೇಮಿಸಿದನು. ಮತ್ತೊಂದೆಡೆ, ಹಝ್ರತ್ ಮುಸನ್ನ ಮತ್ತು ಹಝ್ರತ್ ಮುಅನ್ನ ಶತ್ರುಗಳ ಈ ಸಿದ್ಧತೆಯ ಮಾಹಿತಿಯನ್ನು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರಿಗೆ ಕಳುಹಿಸಿದರು. ಹಝ್ರತ್ ಖಾಲಿದ್(ರ) ಅವರಿಗೆ ಖಾರಿನ್‌ನ ಸುದ್ದಿ ತಿಳಿದ ತಕ್ಷಣ, ಅವರು ಝಾತುಲ್–ಸಲಾಸಿಲ್ ಯುದ್ಧದಲ್ಲಿ ಪಡೆದ ಸಂಪತ್ತನ್ನು ಆ ಮುಜಾಹಿದೀನ್‌ಗಳಿಗೆ ನೀಡಿದರು ಮತ್ತು ಖುಮ್ಸ್‌ನಿಂದ ತನಗೆ ಬೇಕಾದಷ್ಟು ಉಳಿದವರಿಗೆ ಹಂಚಿದರು. ಝುತುಲ್–ಸಲಾಸಿಲ್ ಯುದ್ಧದಲ್ಲಿ ಗಳಿಸಿದ ಸಂಪತ್ತನ್ನು ಮತ್ತು ಈ ಯುದ್ಧದಲ್ಲಿ ವಿಜಯದ ಶುಭ ಸುದ್ದಿಯನ್ನು ಹಝ್ರತ್ ಅಬುಬಕರ್(ರ) ಅವರ ಸೇವೆಗೆ ಕಳುಹಿಸಲಾಯಿತು ಮತ್ತು ಯುದ್ಧದಲ್ಲಿ ಶತ್ರುಗಳನ್ನು ಸೋಲಿಸಿದ ಪಡೆಗಳು ಝುತುಲ್ ಸಲಾಸಿಲ್ ಮತ್ತು ಖಾರಿನ್ ನೇತೃತ್ವದಲ್ಲಿ ಹೊಸ ಸೈನ್ಯವು ಒಂದೇ ಸ್ಥಳದಲ್ಲಿ ಒಟ್ಟುಗೂಡುತ್ತಿದೆ. ಆದ್ದರಿಂದ ಹಝ್ರತ್ ಖಾಲಿದ್(ರ) ಹೊರಟು ಮಝಾರ್‌ನಲ್ಲಿ ಖಾರಿನ್‌ನ ಸೈನ್ಯವನ್ನು ಎದುರಿಸಲು ಬಂದು ತನ್ನ ಸೈನ್ಯವನ್ನು ಸಾಲಾಗಿ ನಿಲ್ಲಿಸಿದರು. ಎರಡೂ ಕಡೆಯಿಂದ ಯುದ್ಧ ನಡೆಯಿತು. ಇಬ್ಬರು ಪ್ರತಿಸ್ಪರ್ಧಿಗಳ ತೀವ್ರ ಕೋಪದ ಸ್ಥಿತಿಯಲ್ಲಿ ಯುದ್ಧ ನಡೆಯಿತು. ಖಾರಿನ್ ಹೋರಾಡಲು ಮೈದಾನಕ್ಕೆ ಹೋದನು. ಇನ್ನೊಂದು ಬದಿಯಲ್ಲಿ, ಹಝ್ರತ್ ಖಾಲಿದ್(ರ) ಮತ್ತು ಹಝ್ರತ್ ಮುವಾಕಲ್ ಬಿನ್ ಆಶಾ(ರ) ಅವರು ಮುಂದಾದರು. ಇಬ್ಬರೂ ಖಾರಿನ್ ಕಡೆಗೆ ಓಡಿಹೋದರು, ಆದರೆ ಹಝ್ರತ್ ಮಾಕಲ್ ರವರು ಹಝ್ರತ್ ಖಾಲಿದ್(ರ) ರವರ ಮುಂದೆ ಖಾರಿನ್ ಅವನನ್ನು ಕೊಂದನು. ಹಝ್ರತ್ ಅಸೀಮ್(ರ) ಅನುಷಾಜನ್ನನ್ನು ಕೊಂದರು ಮತ್ತು ಹಝ್ರತ್ ಆದಿ(ರ) ಕುಬಾಝ್‌ನನ್ನು ಕೊಂದರು. ಈ ಮೂವರು ಮುಖ್ಯಸ್ಥರು ಕೊಲ್ಲಲ್ಪಟ್ಟ ನಂತರ, ಇರಾನಿಯನ್ನರು ತಮ್ಮ ಧೈರ್ಯವನ್ನು ಕಳೆದುಕೊಂಡರು ಮತ್ತು ಮೈದಾನವನ್ನು ಬಿಟ್ಟು ಓಡಿಹೋಗಲು ಪ್ರಾರಂಭಿಸಿದರು. ಈ ಯುದ್ಧದಲ್ಲಿ ಹೆಚ್ಚಿನ ಸಂಖ್ಯೆಯ ಪರ್ಷಿಯನ್ನರು ಕೊಲ್ಲಲ್ಪಟ್ಟರು ಮತ್ತು ಹಿಮ್ಮೆಟ್ಟಿಸಿದವರು ತಮ್ಮ ದೋಣಿಗಳಲ್ಲಿ ಓಡಿಹೋದರು. ಹಝ್ರತ್ ಖಾಲಿದ್(ರ) ಮಝಾರ್‌ನಲ್ಲಿ ಉಳಿದುಕೊಂಡರು ಮತ್ತು ಪ್ರತಿ ಕೊಲ್ಲಲ್ಪಟ್ಟವನ ವಸ್ತುಗಳನ್ನು ಅವರ ಮೌಲ್ಯವನ್ನು ಲೆಕ್ಕಿಸದೆ, ಅವರನ್ನು ಕೊಂದ ಮುಜಾಹಿದ್‌ಗಳಿಗೆ ನೀಡಿದರು ಮತ್ತು ಅವರಲ್ಲಿ ಸಂಪತ್ತನ್ನು ಹಂಚಿದರು ಮತ್ತು ಪ್ರಮುಖರಿಗೆ ಖುಮ್ಸ್‌ಗಳ ಪಾಲು ನೀಡಿದರು. ಮತ್ತು ಹಝ್ರತ್ ಸಯೀದ್ ಬಿನ್ ನುಮಾನ್(ರ) ನೇತೃತ್ವದ ನಿಯೋಗದೊಂದಿಗೆ ಉಳಿದ ಖುಮ್ಸ್‌ಗಳನ್ನು ಮದೀನಾಕ್ಕೆ ಕಳುಹಿಸಿದರು. ಒಂದು ವರದಿಯ ಪ್ರಕಾರ, ಈ ಯುದ್ಧದಲ್ಲಿ 30,000 ಇರಾನಿಯನ್ನರು ಕೊಲ್ಲಲ್ಪಟ್ಟರು, ಕಾಲುವೆಯಲ್ಲಿ ಮುಳುಗಿ ಸತ್ತವರನ್ನು ಹೊರತುಪಡಿಸಿ, ನೀರು ತಡೆಯದಿದ್ದರೆ ಅವರಲ್ಲಿ ಒಬ್ಬರೂ ಬದುಕುತ್ತಿರಲಿಲ್ಲ ಎಂದು ಹೇಳಲಾಗುತ್ತದೆ. ಆದಾಗ್ಯೂ, ತಪ್ಪಿಸಿಕೊಂಡು ಬಂದವರು ತುಂಬಾ ಅಸ್ತವ್ಯಸ್ತವಾಗಿರುವ ಸ್ಥಿತಿಯಲ್ಲಿ ತಪ್ಪಿಸಿಕೊಂಡರು ಮತ್ತು ಅವರು ಹೊಂದಿದ್ದ ಎಲ್ಲವನ್ನೂ ಬಿಟ್ಟುಬಿಟ್ಟರು. ಯುದ್ಧದ ನಂತರ, ಹೋರಾಟದಲ್ಲಿ ಭಾಗವಹಿಸಿದವರು ಮತ್ತು ಇರಾನ್ ಸೈನ್ಯವನ್ನು ಬೆಂಬಲಿಸಿದವರು ಅವರ ಕುಟುಂಬಗಳೊಂದಿಗೆ ಜೈಲಿನಲ್ಲಿದ್ದರು. ಈ ಕೈದಿಗಳಲ್ಲಿ ಅಬುಲ್ ಹಸನ್ ಬಸ್ರಿ ಕೂಡ ಸೇರಿದ್ದರು. ಅಬುಲ್ ಹಸನ್ ಬಸ್ರಿ ಇಮಾಮ್ ಹಸನ್ ಬಸ್ರಿ ಅವರ ತಂದೆ ಎಂದು ಹೇಳಲಾಗುತ್ತದೆ, ಪ್ರಸಿದ್ಧ ಬೋಧಕ ಮತ್ತು ಬಾಸ್ರಾ ಸೂಫಿ ಇಸ್ಲಾಂಗೆ ಮತಾಂತರಗೊಂಡರು. ಅಬುಲ್ ಹಸನ್ ಬಸ್ರಿಯನ್ನು ಬಂಧಿಸಿದ ನಂತರ, ಅವರನ್ನು ಮದೀನಾಕ್ಕೆ ಕರೆತರಲಾಯಿತು ಎಂದು ಹೇಳಲಾಗುತ್ತದೆ, ಅಲ್ಲಿ ಅವರ ವಡತಿ ಅವರನ್ನು ಸ್ವತಂತ್ರಗೊಳಿಸಸಿದರು. (ತಾರೀಖ್ ಅತ್ತಬರಿ, ಸಂಪುಟ–2, ಪಉಟ–311–312, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2012) (ಉರ್ದು ದಾಏರ ಮಾರಿಫ್ ಇಸ್ಲಾಮಿಯ, ಸಂಪುಟ–8, ಪುಟ–262)

ಈ ವಿಜಯದ ನಂತರ, ಸಾಮಾನ್ಯ ಪ್ರಜೆಗಳನ್ನು ಬಹಳ

ಸೌಮ್ಯತೆಯಿಂದ ನಡೆಸಿಕೊಳ್ಳಲಾಯಿತು. ರೈತರು ಮತ್ತು ಅಂತಹ ಎಲ್ಲ ಜನರನ್ನು ಯಾವುದೇ ಅನಾನುಕೂಲತೆ ಇಲ್ಲದೆ ಜಿಝ್ಯ ಪಾವತಿಸಲು ಪ್ರೇರೇಪಿಸಲಾಯಿತು ಮತ್ತು ಅವರ ಜಮೀನು ಮತ್ತು ಸ್ಥಳಗಳಲ್ಲಿ ಉಳಿಸಿಕೊಳ್ಳಲಾಯಿತು. ಈ ಆರಂಭಿಕ ವ್ಯವಹಾರಗಳಿಂದ ಮುಕ್ತವಾದ ನಂತರ, ಹಝ್ರತ್ ಖಾಲಿದ್(ರ) ಅವರು ವಶಪಡಿಸಿಕೊಂಡ ಪ್ರದೇಶದ ಆಡಳಿತದತ್ತ ಗಮನ ಹರಿಸಿದರು.

ಜಿಝ್ಯವನ್ನು ಸ್ವೀಕರಿಸಲು, ಕಾರ್ಮಿಕರನ್ನು ನೇಮಿಸಲಾಯಿತು. ವಶಪಡಿಸಿಕೊಂಡ ಪ್ರದೇಶವನ್ನು ರಕ್ಷಿಸಲು, ಅವರು ಹಫೀರ್ ಮತ್ತು ಜಿಸ್ರಿ–ಎ–ಆಝುಮ್ ಎಂಬ ದೊಡ್ಡ ಸೇತುವೆಯಲ್ಲಿ ಪಡೆಗಳನ್ನು ನಿಲ್ಲಿಸಿದರು, ಅವುಗಳ ನಿರ್ವಹಣೆಯನ್ನು ಸುಧಾರಿಸಲಾಯಿತು ಮತ್ತು ಸೈನ್ಯದ ಎಲ್ಲಾ ಪಡೆಗಳನ್ನು ವಿವಿಧ ಅಧಿಕಾರಿಗಳು ಮೇಲ್ವಿಚಾರಣೆ ಮಾಡಿದರು ಮತ್ತು ಅವರಿಗೆ ಶತ್ರುಗಳ ರಹಸ್ಯ ಮತ್ತು ಸಾರ್ವಜನಿಕ ಚಟುವಟಿಕೆಗಳ ಬಗ್ಗೆ ಎಚ್ಚರವಹಿಸಿ ಮತ್ತು ಅವಶ್ಯಕತೆ ಬೀರಿದಾಗ ಅವರೊಂದಿಗೆ ಹೋರಾಡಲು ಆದೇಶಿಸಿದರು. ಖಾಲಿದ್(ರ) ರವರ ಯುದ್ಧ ಕೌಶಲ್ಯಕ್ಕೆ ಇದಕ್ಕಿಂತ ಹೆಚ್ಚಿನ ಪುರಾವೆ ಏನಿದೆ, ಇರಾನ್‌ನಲ್ಲಿ ಅವರ ಮುನ್ನಡೆಯ ಪ್ರಾರಂಭದಿಂದಲೇ, ಕಸ್ರಾದ ಪ್ರಬಲ ಸೈನ್ಯಗಳು ಸೋಲನುಭವಿಸಲು ಪ್ರಾರಂಭಿಸಿದವು ಮತ್ತು ಅವರ ಧೈರ್ಯ, ಶೌರ್ಯ ಮತ್ತು ಮಹತ್ವಾಕಾಂಕ್ಷೆಗಳು ತಣ್ಣಗಾದವು.

ಮಝಾರ್ ಯುದ್ಧವು ಹೀರಾದಿಂದ ಸ್ವಲ್ಪ ದೂರದಲ್ಲಿ ನಡೆಯಿತು. ಹೀರಾ ಬಹುತೇಕ ಗಲ್ಫ್ ಮತ್ತು ಮದಾಯಿನ್‌ನ ಮಧ್ಯದಲ್ಲಿ ನೆಲೆಗೊಂಡಿದೆ. (ಹಝ್ರತ್ ಅಬುಬಕರ್ ಸಿದ್ದೀಕ್ ಅಕ್ಬರ್(ರ) ಮುಹಮ್ಮದ್ ಹುಸೇನ್ ಹೈಕಲ್, ಪುಟ–275, ಶೇಖ್ ಮುಹಮ್ಮದ್ ಅಹ್ಮದ್ ಪಾಣಿಪತಿ ಇಲ್ಮ್ ಮತ್ತು ಇರ್ಫಾನ್ ಪಬ್ಲಿಷರ್ಸ್ ಲಾಹೋರ್ 2004)

ಈ ಯುದ್ಧದ ನಂತರದ ಪರಿಣಾಮಗಳೊಂದಿಗೆ ವ್ಯವಹರಿಸಿದ ನಂತರ, ಹಝ್ರತ್ ಖಾಲಿದ್ ಬಿನ್ ವಲೀದ್(ರ) ಶತ್ರುಗಳ ಚಲನವಲನಗಳ ಸುದ್ದಿಗಳನ್ನು ಹುಡುಕಲು ಪ್ರಾರಂಭಿಸಿದರು. (ತಾರಿಖ್ ಅಲ್–ತಬರಿ, ಸಂಪುಟ–2, ಪುಟ–312, ದಾರ್ ಅಲ್–ಕಿತಾಬ್ ಅಲ್–ಉಲಮಿಯಾ ಬೈರುತ್ 2012) ಶತ್ರುಗಳ ಚಲನವಲನ ಹೇಗಿತ್ತು ಎಂಬುದನ್ನು ನೋಡಲು. ಅವರು ಪುನಃ ಇಸ್ಲಾಂ ವಿರುದ್ಧ ಮತ್ತೆ ಒಂದಾಗುತ್ತಿದ್ದಾರೆಯೇ? ಎಂದು ನೋಡಲು ಹಝ್ರತ್ ಖಾಲಿದ್(ರ)ರವರು ಶತ್ರುಗಳ ಮೇಲೆ ನಿಗಾಹ್ ನೀಡಿದ್ದರು.

ವಲಜ ಯುದ್ಧವು ಒಂದು ಯುದ್ಧವಾಗಿದೆ. ವಾಲಜ ಕದನ ಇದು ಹನ್ನೆರಡು ಹಿಜ್ರಿಯಲ್ಲಿ ಸಂಭವಿಸಿತು. ವಲಜ ಕಸ್ಕರ್ ಬಳಿಯ ಒಣ ಪ್ರದೇಶವಾಗಿದೆ. ಮಝಾರ್ ಕದನದಲ್ಲಿ ಇರಾನಿಯನ್ನರು ನಾಚಿಕೆಗೇಡಿನ ಸೋಲನ್ನು ಅನುಭವಿಸಿದರು, ಇದರಲ್ಲಿ ಅವರ ಮಹಾನ್ ನಾಯಕರೂ ಕೊಲ್ಲಲ್ಪಟ್ಟರು. ಇದರ ಮೇಲೆ ಇರಾನ್ ಚಕ್ರವರ್ತಿ ಮತ್ತೊಂದು ತಂತ್ರವನ್ನು ನಿರ್ಧರಿಸಿದನು ಮತ್ತು ಹೆಚ್ಚಿನ ಸಿದ್ಧತೆಯೊಂದಿಗೆ ಮುಸ್ಲಿಮರನ್ನು ಎದುರಿಸಲು ಯೋಜಿಸಿದನು. ಆದ್ದರಿಂದ ಇರಾನ್ ಸರ್ಕಾರವು ಇರಾಕ್‌ನಲ್ಲಿ ವಾಸಿಸುವ ಕ್ರಿಶ್ಚಿಯನ್ನರ ದೊಡ್ಡ ಬುಡಕಟ್ಟು ಬಕರ್ ಬಿನ್ ವೈಲ್‌ನ ನಾಯಕರನ್ನು ಇರಾನ್ ನ್ಯಾಯಾಲಯಕ್ಕೆ ಆಹ್ವಾನಿಸಿದನು ಮತ್ತು ಮುಸ್ಲಿಮರೊಂದಿಗೆ ಹೋರಾಡಲು ಮತ್ತು ಸೈನ್ಯವನ್ನು ಸಂಘಟಿಸಲು ಮನವೊಲಿಸಿದನು ಮತ್ತು ಈ ಸೈನ್ಯವನ್ನು ಪ್ರಸಿದ್ಧ ಚಕ್ರವರ್ತಿಯಾದ ಅನ್‌ದರ್ ಝುಗರ್‌ನಿಗೆ ನೇತೃತ್ವ ವಹಿಸಿದ್ದರು. ಮತ್ತು ಈ ಸೈನ್ಯವು ವಲಜಗೆ ಹೊರಟಿತು. ಇರಾಕ್‌ನಲ್ಲಿ ಕ್ರಿಶ್ಚಿಯನ್ನರ ಒಂದು ದೊಡ್ಡ ಬುಡಕಟ್ಟು ಬಕರ್ ಬಿನ್ ವಾಇಲ್ ನೆಲಸಿದ್ದರು. ಚಕ್ರವರ್ತಿ ಅರ್ದಶಿರ್ ಅವರನ್ನು ಕರೆಸಿ ಅವರ ಸೈನ್ಯವನ್ನು ಸಂಘಟಿಸಿ ಮುಸ್ಲಿಮರ ವಿರುದ್ಧ ಹೋರಾಡಲು ವಲಜಗೆ ಕಳುಹಿಸಿದನು. ಹಿರಾ ಮತ್ತು ಕಸ್ಕರ್ ಉಪನಗರಗಳ ಜನರು ಮತ್ತು ರೈತರು ಸಹ ಈ ಸೈನ್ಯಕ್ಕೆ ಸೇರಿದರು. ಹಿರಾ ಕುಫಾದಿಂದ ಮೂರು ಮೈಲಿ ದೂರದಲ್ಲಿರುವ ನಗರವಾಗಿದೆ. ಕಸ್ಕರ್, ಕೂಫಾ ಮತ್ತು ಬಸ್ರಾ ನಡುವಿನ ಪಟ್ಟಣವಾಗಿತ್ತು. ಆದಾಗ್ಯೂ, ಮುಸ್ಲಿಮರ ಮೇಲಿನ ವಿಜಯದ ಹೆಮ್ಮೆಯನ್ನು ಕ್ರಿಶ್ಚಿಯನ್ ಅರಬ್ಬರು ಸಂಪೂರ್ಣವಾಗಿ ಹಂಚಿಕೊಳ್ಳಬಾರದು ಎಂಬ ಕಲ್ಪನೆಯೊಂದಿಗೆ, ಅವರು ತಮ್ಮ ಮಹಾನ್ ಸೇನಾಧಿಪತಿಗಳಲ್ಲಿ ಒಬ್ಬನಾದ ಬಹ್ಮನ್ ಜಝ್ವಿಯಾ ಅವನನ್ನು ಅವರ ಹಿಂದೆ ಭಾರೀ ಸೈನ್ಯದೊಂದಿಗೆ ಕಳುಹಿಸಿದನು. (ತಾರಿಖ್ ಅಲ್–ತಬರಿ, ಸಂಪುಟ–2, ಪುಟ–312, ದಾರ್ ಅಲ್–ಕಿತಾಬ್ ಅಲ್–ಇಲಾಮಿಯಾ 2012) (ಹಝ್ರತ್ ಅಬುಬಕರ್ ಸಿದ್ದಿಕ್(ರ), ಮುಹಮ್ಮದ್ ಹುಸೇನ್ ಹೈಕಲ್ ಅನುವಾದಕ, ಪುಟ 287–288)

ಈ ಪರ್ಷಿಯನ್ ಮುಖ್ಯಸ್ಥನಿಗೆ ತನ್ನ ಸೈನ್ಯವು ತುಂಬಾ ದೊಡ್ಡದಾಗಿದೆ ಎಂದು ಅರಿತುಕೊಂಡಾಗ, ಅವನು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮೇಲೆ ದಾಳಿ ಮಾಡಲು ನಿರ್ಧರಿಸಿದನು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ವಲಜದಲ್ಲಿ ಪರ್ಷಿಯನ್ ಸೈನ್ಯವನ್ನು ಒಟ್ಟುಗೂಡಿಸುವ ಸುದ್ದಿಯನ್ನು ಸ್ವೀಕರಿಸಿದಾಗ, ಅವರು ಆ ಸಮಯದಲ್ಲಿ ಬಸ್ರಾ ಬಳಿಯಿದ್ದರು. ಪರ್ಷಿಯನ್ ಸೈನ್ಯವನ್ನು ಮೂರು ದಿಕ್ಕುಗಳಿಂದ ಆಕ್ರಮಣ ಮಾಡುವುದು ಸೂಕ್ತವೆಂದು ಅವರು ಪರಿಗಣಿಸಿದರು, ಇದರಿಂದಾಗಿ ಅವರ ಗುಂಪು ಚದುರಿಹೋಗುತ್ತದೆ ಮತ್ತು ಪರ್ಷಿಯನ್ ಸೈನ್ಯವು ಹಠಾತ್ ದಾಳಿಯಿಂದ ತೊಂದರೆಗೊಳಗಾಗುತ್ತದೆ. (ಸಯ್ಯಿದುನಾ ಅಬೂಬಕರ್ ಸಿದ್ದೀಕ್(ರ), ಡಾ. ಅಲಿ ಮುಹಮ್ಮದ್ ಸಲಬಿ ಅನುವಾದಿಸಿದ್ದಾರೆ, ಪುಟ–406)

ಆದ್ದರಿಂದ ಅವರು ಸುವೈದ್ ಬಿನ್ ಮುಕಾರಿನ್ ಅವರನ್ನು ಗವರ್ನರ್ ಆಗಿ ನೇಮಿಸಿದರು ಮತ್ತು ಹಾಫಿರ್‌ನಲ್ಲಿ ಉಳಿಯಲು ಮತ್ತು ಅವರು ದಿಜ್ಲದ ಕೆಳಭಾಗದಲ್ಲಿ ಬಿಟ್ಟುಹೋದ ಜನರನ್ನು ತಲುಪಲು ಆದೇಶಿಸಿದರು. ಸದಾ ಶತ್ರುಗಳ ವಿರುದ್ಧ ಕಾವಲು ಕಾಯುವಂತೆಯೂ ನಿರ್ಲಕ್ಷತನದಿಂದ ಭ್ರಮೆಯಿಂದ ಇರಬಾರದೆಂದು ಆಜ್ಞಾಪಿಸಿ ತನ್ನ ಸೈನ್ಯವನ್ನು ವಲಜದೆಡೆಗೆ ಸಾಗಿ ಶತ್ರುಸೇನೆಯನ್ನೂ ಅದರ ಬೆಂಬಲಿಗರನ್ನು ಎದುರಿಸಿ ಘೋರ ಯುದ್ಧವು ನಡೆಯಿತು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮುಜಾಹಿದ್ದೀನ್ ಸೇನೆಯ ಎರಡೂ ಕಡೆಗಳಲ್ಲಿ ಹೊಂಚುದಾಳಿ ನಡೆಸಿದ್ದರು. ಅಂತಿಮವಾಗಿ, ಹೊಂಚು ಹಾಕಿದ ಎರಡೂ ಪಡೆಗಳು ಎರಡೂ ಕಡೆಯಿಂದ ಶತ್ರುಗಳ ಮೇಲೆ ದಾಳಿ ಮಾಡಿದವು. ಇರಾನಿನ ಪಡೆಗಳು ಸೋತ ನಂತರ ಓಡಿಹೋದರು, ಆದರೆ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರನ್ನು ಮುಂಭಾಗದಿಂದ ಮತ್ತು ಹಿಂದಿನಿಂದ ಹೊಂಚುದಾಳಿಯಲ್ಲಿದ್ದ ಎರಡು ಪಡೆಗಳನ್ನು ಸುತ್ತುವರೆದರು, ಆದ್ದರಿಂದ ಅವರು ತುಂಬಾ ಭಯಭೀತರಾಗಿದ್ದರು, ಅವರ ಸಹಚರನ ಹತ್ಯೆಯ ಬಗ್ಗೆಯೂ ಯಾರೂ ಕಾಳಜಿ ವಹಿಸಲಿಲ್ಲ. ಶತ್ರು ಸೈನ್ಯದ ಸೇನಾಧಿಪತಿಯು ಸೋಲಿಸಲ್ಪಟ್ಟರು ಮತ್ತು ಅಂತಿಮವಾಗಿ ಕೊಲ್ಲಲ್ಪಟ್ಟರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರು ರೈತರನ್ನು ಹೇಗೆ ನಡೆಸಿಕೊಂಡರು, ಅಂದರೆ ಅವರು ಯಾರನ್ನೂ ಕೊಲ್ಲಲಿಲ್ಲ. ಕೇವಲ ಯುದ್ಧದಲ್ಲಿ ಹೋರಾಡಿದ ಜನರ ವಂಶಸ್ಥರನ್ನು ಮತ್ತು ಅವರ ಬೆಂಬಲಿಗರನ್ನು ಮಾತ್ರ ಬಂಧಿಸಿದರು ಮತ್ತು ದೇಶದ ಸಾಮಾನ್ಯ ಜನರನ್ನು ಜಿಝ್ಯ ಪಾವತಿಸಲು ಮತ್ತು ದಿಮ್ಮಿಗಳಾಗಲು ಆಹ್ವಾನಿಸಿದರು, ಅದನ್ನು ಅವರು ಒಪ್ಪಿಕೊಂಡರು. (ತಾರೀಖ್ ತಬರಿ, ಸಂಪುಟ–2, ಪುಟ–312, ದಾರ್ ಅಲ್–ಕಿತಾಬ್ ಅಲ್–ಉಲಮಿಯಾ 2012)

ನಂತರ ಉಲ್ಲೈಸ್ ಯುದ್ಧದ ಉಲ್ಲೇಖವಿದೆ. ಹನ್ನೆರಡು ಹಿಜರಿಯಲ್ಲಿ ಸಫರ್ ತಿಂಗಳಲ್ಲಿ ಈ ಯುದ್ಧ ನಡೆಯಿತು. ಇರಾಕ್‌ನಲ್ಲಿರುವ ಅನ್ಬರ್‌ನ ವಸಾಹತುಗಳಲ್ಲಿ ಉಲ್ಲೈಸ್ ಕೂಡ ಒಂದಾಗಿತ್ತು. ಹಝ್ರತ್ ಖಾಲಿದ್(ರ) ಅವರ ಕೈಯಲ್ಲಿ ವಾಲಜದ ದಿನದಂದು, ಬಕರ್ ಬಿನ್ ವಾಇಲ್ ಬುಡಕಟ್ಟು ಮತ್ತು ಇರಾನಿಯನ್ನರು ಮತ್ತೊಂದು ಭೀಕರ ಸೋಲನ್ನು ಅನುಭವಿಸಿದ್ದರಿಂದ ಅವರ ಇನ್ನೊಂದು ಸಮೂದಾಯ ಕ್ರೈಸ್ತರು ಕೋಪಗೊಂಡರು. ಅವರು ಇರಾನಿಯನ್ನರಿಗೆ ಪತ್ರಗಳನ್ನು ಬರೆದರು ಮತ್ತು ಇರಾನಿಯನ್ನರು ಅವರಿಗೆ ಪತ್ರಗಳನ್ನು ಬರೆದರು ಮತ್ತು ಎಲ್ಲರೂ ಉಲ್ಲೈಸ್ ಸ್ಥಳದಲ್ಲಿ ಒಟ್ಟುಗೂಡಿದರು. ಅಬ್ದ್ ಅಲ್–ಅಸ್ವದ್ ಅಜ್ಲಿ ಅವರನ್ನು ಮುಖ್ಯಸ್ಥರನ್ನಾಗಿ ನೇಮಿಸಲಾಯಿತು. ಅದೇ ರೀತಿಯಲ್ಲಿ, ಇರಾನಿನ ರಾಜನು ಬಹಮಾನ್ ಜಜ್ವಿಯಾಗೆ ಪತ್ರ ಬರೆದನು, ನೀವು ನಿಮ್ಮ ಸೈನ್ಯದೊಂದಿಗೆ ಉಲ್ಲೈಸ್‌ಗೆ ತಲುಪಿ ಮತ್ತು ಪರ್ಷಿಯಾ ಮತ್ತು ಅರೇಬಿಯಾದ ಕ್ರಿಶ್ಚಿಯನ್ನರ ನಡುವೆ ಅಲ್ಲಿ ನೆರೆದಿರುವ ಜನರನ್ನು ಭೇಟಿಯಾಗಬೇಕು, ಆದರೆ ಬಹ್ಮನ್ ಜಜ್ವಿಯಾ ಸ್ವತಃ ಸೈನ್ಯದೊಂದಿಗೆ ಹೋಗಲಿಲ್ಲ, ಆದರೆ ಅವನು ಆ ಸ್ಥಳಕ್ಕೆ ಇನ್ನೊಬ್ಬ ಹೆಸರಾಂತ ಧೈರ್ಯಶಾಲಿಯಾದ ಜಬಾನ್‌ನನ್ನು ಕಳುಹಿಸಿದನು ಮತ್ತು ಜನರ ಹೃದಯದಲ್ಲಿ ಯುದ್ಧದ ಮನೋಭಾವವನ್ನು ಹುಟ್ಟುಹಾಕಲು ಆಜ್ಞಾಪಿಸಿದನು, ಆದರೆ ನಾನು ಬರುವವರೆಗೂ ಶತ್ರುಗಳೊಂದಿಗೆ ಯುದ್ಧವನ್ನು ಪ್ರಾರಂಭಿಸಬಾರದು, ಆದರೆ ಎದುರಾಳಿಗಳು ಸ್ವತಃ ಮುಂದುವರಿದರೆ ಮಾತ್ರ ಯುದ್ಧವಾಡಿರಿ. ಜಬಾನ್ ಉಲ್ಲೈಸ್‌ಗೆ ಹೊರಟಿದನು. ಬಹಮಾನ್ ಜಜ್ವಾಯಾ ಸ್ವತಃ ಇರಾನಿನ ರಾಜ ಅರ್ದಶಿರ್ ಅವರನ್ನು ಸಮಾಲೋಚಿಸಲು ಹೋದನು, ಆದರೆ ಇಲ್ಲಿಗೆ ಬಂದು ರಾಜನು ಅನಾರೋಗ್ಯದಿಂದ ಮಲಗಿರುವುದನ್ನು ಕಂಡುಕೊಂಡನು. ಆದ್ದರಿಂದ, ಬಹಮಾನ್ ಜಜ್ವಿಯಾ ಅವರನ್ನು ನೋಡಿಕೊಂಡನು ಮತ್ತು ಜಬಾನ್‌ಗೆ ಯಾವುದೇ ಸೂಚನೆಗಳನ್ನು ಕಳುಹಿಸಲಿಲ್ಲ. ಜಬಾನ್ ಒಬ್ಬಂಟಿಯಾಗಿಯೇ ಸೈನ್ಯದೊಂದಿಗೆ ಯುದ್ಧರಂಗಕ್ಕೆ ಹೊರಟು ಸಫರ್ ತಿಂಗಳಲ್ಲಿ ಉಲ್ಲೈಸ್‌ಗೆ ತಲುಪಿದನು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–313, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2012) (ಮುಜಮುಲ್ ಬಲದಾನ್, ಸಂಪುಟ–1, ಪುಟ–294, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ವಿವಿಧ ಗೋತ್ರಗಳಿಂದ ಮತ್ತು ಹಿರಾದ ಉಪನಗರಗಳಿಂದ ಅರಬ್ ಕ್ರಿಶ್ಚಿಯನ್ನರು ಜಬಾನ್‌ನ ಬಳಿ ಬಂದು ಸೇರಿದರು. ಈ ಕ್ರಿಶ್ಚಿಯನ್ ಗುಂಪುಗಳ

ಸೇರುವಿಕೆಯ ಬಗ್ಗೆ ಹಝ್ರತ್ ಖಾಲಿದ್(ರ) ಅವರಿಗೆ ತಿಳಿಸಿದಾಗ, ಅವರು ಅವರೊಂದಿಗೆ ಹೋರಾಡಲು ಹೊರಟರು, ಆದರೆ ಜಬಾನ್ ಕೂಡ ಹತ್ತಿರ ಬಂದಿರುವುದು ಅವರಿಗೆ ತಿಳಿದಿರಲಿಲ್ಲ. ಹಝ್ರತ್ ಖಾಲಿದ್(ರ) ಈ ಅರಬ್ಬರು ಮತ್ತು ಕ್ರಿಶ್ಚಿಯನ್ನರ ವಿರುದ್ಧ ಹೋರಾಡುವ ಉದ್ದೇಶದಿಂದ ಮಾತ್ರ ಬಂದಿದ್ದರು, ಆದರೆ ಉಲ್ಲೈಸ್‌ನಲ್ಲಿ ಅವರು ಜಬಾನ್ ಅವನನ್ನು ಎದುರಿಸಿದರು. ಜಬಾನ್ ಉಲ್ಲೈಸ್ ತಲುಪಿದಾಗ, ಈ ಸಂದರ್ಭದಲ್ಲಿ, ಅಜಮಿಗಳು ಜಬಾನ್ ಅವರ ಅಭಿಪ್ರಾಯವನ್ನು ಕೇಳಿದರು. ನಾವು ಅವರ ಸುದ್ದಿಯನ್ನು ಮೊದಲು ತೆಗೆದುಕೊಳ್ಳಬೇಕೇ ಅಥವಾ ಜನರಿಗೆ ಆಹಾರ ನೀಡಬೇಕೇ? ಅಂದರೆ, ಯುದ್ಧವನ್ನು ಪ್ರಾರಂಭಿಸುವುದೇ ಅಥವಾ ಮೊದಲು ಆಹಾರವನ್ನು ಸೇವಿಸಿ ನಂತರ ಅವರೊಂದಿಗೆ ಯುದ್ಧವಾಡಬೇಕು. ಅದಕ್ಕೆ ಜಾಬಾನ್ ಹೇಳಿದನು ಶತ್ರುಗಳು ನಿಮ್ಮ ಮೇಲೆ ದಾಳಿ ಮಾಡದಿದ್ದರೆ, ನೀವು ಸಹ ಮೌನವಾಗಿರಬೇಕು, ಆದರೆ ಅವರು ನಿಮ್ಮ ಮೇಲೆ ಇದ್ದಕ್ಕಿದ್ದಂತೆ ದಾಳಿ ಮಾಡುತ್ತಾರೆ ಮತ್ತು ನಿಮಗೆ ತಿನ್ನಲು ಬಿಡುವುದಿಲ್ಲ ಎಂದು ನಾನು ಭಾವಿಸುತ್ತೇನೆ ಎಂದು ಜಬಾನ್ ಹೇಳಿದನು. ಈ ಜನರು ಜಬಾನ ಮಾತನ್ನು ಕೇಳಲಿಲ್ಲ. ಆಹಾರವನ್ನು ತಿನ್ನುವುದರಲ್ಲಿ ನಿರತರಾದರು. (ಅಲ್-ಕಾಮಲ್ ಫಿ ಅಲ್-ತಾರಿಖ್, ಸಂಪುಟ-2, ಪುಟ-241, ದಾರ್ ಅಲ್-ಕಿತಾಬ್ ಅಲ್-ಉಲಮಿಯಾ ಬೈರುತ್, 2006)

ಹಝ್ರತ್ ಖಾಲಿದ್(ರ) ಶತ್ರುಗಳು ಎದುರು ತಲುಪಿ ನಿಂತರು. ಸರಕುಗಳನ್ನು ಇಳಿಸಲು ಆದೇಶಿಸಿದರು. ಅವರು ಈ ಕೆಲಸದಿಂದ ಮುಕ್ತರಾದ ನಂತರ, ಅವರು ಶತ್ರುಗಳ ಕಡೆಗೆ ತಿರುಗಿದರು. ಹಝ್ರತ್ ಖಾಲಿದ್(ರ) ತನ್ನ ಹಿಂಭಾಗವನ್ನು ರಕ್ಷಿಸಲು ಕಾವಲುಗಾರರನ್ನು ನೇಮಿಸಿ ಶತ್ರುಗಳ ರೇಖೆಯ ಕಡೆಗೆ ಮುನ್ನಡೆದು ಕೇಳಿದರು ಅಬ್ಜರ್ ಎಲ್ಲಿದ್ದಾನೆ? ಅಬ್ದುಲ್ ಅಸ್ವದ್ ಎಲ್ಲಿದ್ದಾನೆ? ಮಲಿಕ್ ಬಿನ್ ಕೈಸ್ ಎಲ್ಲಿದ್ದಾನೆ? ಹೇಡಿತನದಿಂದ ಮಾಲೀಕನನ್ನು ಹೊರತುಪಡಿಸಿ ಎಲ್ಲರೂ ಮೌನವಾಗಿದ್ದರು. ಮಾಲೀಕನು ನಿಮ್ಮೊಂದಿಗೆ ಹೋರಾಡಲು ಮುಂದಾದನು. ಹಝ್ರತ್ ಖಾಲಿದ್(ರ) ಅವನಿಗೆ ಹೇಳಿದರು: ಇವರೆಲ್ಲರಲ್ಲಿ ನನ್ನ ಮುಂದೆ ಬರಲು ನಿನಗೆ ಧೈರ್ಯ ಏನು? ನನ್ನನ್ನು ವಿರೋಧಿಸುವ ಶಕ್ತಿ ನಿನ್ನಲ್ಲಿ ಎಲ್ಲಿದೆ! ಹೀಗೆ ಹೇಳುತ್ತಾ ಅವನನ್ನು ಹೊಡೆದು ಕೊಂದು ಹಾಕಿದರು ಮತ್ತು ಅಜಮಿಯರಿಗೆ ಏನನ್ನೂ ತಿನ್ನುವ ಮೊದಲೇ ಅವರೆಲ್ಲರಿಗೆ ಊಟದಹಾಸುವಿನ ಮೇಲಿಂದ ಎಬ್ಬಿಸಿದರು. ಜಾಬಾನ್ ತನ್ನ ಜನರಿಗೆ ಹೇಳಿದನು: "ನಾನು ನಿಮಗೆ ಮೊದಲೇ ಹೇಳಲಿಲ್ಲವೇ ತಿನ್ನಲು ಪ್ರಾರಂಭಿಸಬೇಡಿ? ಎಂದು, ಅಲ್ಲಾಹನಆಣೆ! ಈ ಯುದ್ಧದಲ್ಲಿ ನಾನು ಇಂದಿ ತನಕ ಸೇನಾಧಿಪತಿನಿಂದ ಎಂದಿಗೂ ಭಯಭೀತನಾಗಿಲ್ಲ. ಆ ಜನ ಊಟ ಮಾಡಲಾಗದೆ ನಾವು ಮುಸಲ್ಮಾನರನ್ನು ತೊಲಗಿಸುವವರೆಗೆ ಸದ್ಯಕ್ಕೆ ಊಟ ಬಿಡುತ್ತೇವೆ ಆಮೇಲೆ ಊಟ ಮಾಡುತ್ತೇವೆ ಎಂದು ಧೈರ್ಯ ತೋರಿಸಲು ಹೇಳಿದರು. ಜಬಾನ್ ಹೇಳಿದನು: ಅಲ್ಲಾಹನ ಆಣೆ!! ನೀವು ಈ ಆಹಾರವನ್ನು ಶತ್ರುಗಳಿಗಾಗಿ ಇರಿಸಿದ್ದೀರಿ ಎಂದು ನಾನು ಭಾವಿಸುತ್ತೇನೆ. ನೀವು ಗೆಲ್ಲುತ್ತೀರಿ ಮತ್ತು ನಂತರ ತಿನ್ನುತ್ತೀರಿ ಎಂದು ಯೋಚಿಸಬೇಡಿ, ಆದರೆ ಈ ಆಹಾರವನ್ನು ನಿಮ್ಮ ಶತ್ರುಗಳು ತಿನ್ನುತ್ತಾರೆ ಎಂದು ನಾನು ಭಾವಿಸುತ್ತೇನೆ, ಅಂದರೆ ಮುಸ್ಲಿಮರು ಮಾತ್ರ ತಿನ್ನುತ್ತಾರೆ, ನಿಮಗೆ ಪ್ರಜ್ಞೆ ಇಲ್ಲ. ಆಗ ಅವರು ಜನರಿಗೆ ಹೇಳಿದರು, ನನ್ನ ಮಾತುಗಳನ್ನು ಕೇಳಿ, ಅಂದರೆ ಆಹಾರದಲ್ಲಿ ವಿಷವನ್ನು ಸೇರಿಸಿ. ನೀವು ಜಯಶಾಲಿಯಾಗಿದ್ದರೆ, ಆಹಾರದ ನಷ್ಟಕ್ಕಿಂತ ಈ ನಷ್ಟವು ತುಂಬಾ ಕಡಿಮೆಯಾಗಿದೆ ಮತ್ತು ಶತ್ರು ವಿಜಯಶಾಲಿಯಾಗಿದ್ದರೆ, ನೀವು ವಿಷ ಬೆರಿಸಿದ ಆಹಾರವನ್ನು ಸೇವಿಸುವುದರಿಂದ ಶತ್ರುಗಳು ತೊಂದರೆಯನ್ನು ಅನುಭವಿಸುವ ಕೆಲಸ ಮಾಡಿದಿರಿ. ಆದರೆ ಅಲ್ಲಿದ್ದ ಜನ ತಮ್ಮ ಗೆಲುವಿನ ಮೇಲೆ ಅಚಲ ನಂಬಿಕೆ ಇಟ್ಟಿದ್ದರು. ಇಲ್ಲ, ವಿಷ ಬೆರೆಸುವ ಅಗತ್ಯವಿಲ್ಲ ಎಂದು ಈ ಜನರು ಹೇಳಿದರು. ನಾವು ಯುದ್ಧವನ್ನು ಆರಾಮವಾಗಿ ಗೆದ್ದು ನಂತರ ತಿನ್ನುತ್ತೇವೆ. ಹಝ್ರತ್ ಖಾಲಿದ್(ರ) ರವರು ಹಿಂದಿನ ಯುದ್ಧಗಳಲ್ಲಿ ಮಾಡಿದಂತೆ ತಮ್ಮ ಸೈನ್ಯವನ್ನು ಸಜ್ಜುಗೊಳಿಸಿದರು. ಭೀಕರ ಯುದ್ಧ ನಡೆಯಿತು. ಇರಾನಿಯನ್ನರು ಬಹಮನ್ ಜಜ್ವಿಯಾ ಅವರ ಆಗಮನವನ್ನು ನಿರೀಕ್ಷಿಸಿದರು, ಆದ್ದರಿಂದ ಅವರು ದೃಢವಾಗಿ ನಿಂತು ತೀವ್ರವಾಗಿ ಹೋರಾಡಿದರು, ಏಕೆಂದರೆ ಜಾಬಾನ್ ಅವನು ದೊಡ್ಡ ಸೈನ್ಯದೊಂದಿಗೆ ಸಾಗಿ ಬರಲಿದ್ದಾನೆ ಎಂಬ ಭರವಸೆಯನ್ನು ಅವರಿಗೆ ನೀಡುತ್ತಿದ್ದರು, ಆದರೆ ವಾಸ್ತವಿಕ ಸಂಗತಿಯೆಂದರೆ ಬಹ್ಮನ್ ಜಿಝ್ವಿಯಾದ ಇರಾನಿನ ರಾಜನ ಅನಾರೋಗ್ಯದ ಕಾರಣ. ಅವನಿಗೆ ಪರಿಸ್ಥಿತಿಯನ್ನು ರಾಜನಿಗೆ ತಿಳಿಸಲು ಅವಕಾಶ ಸಿಗಲಿಲ್ಲ, ಅಥವಾ ಅವನು ಸ್ವತಃ ಸೈನ್ಯವನ್ನು ತರಲು ಸಾಧ್ಯವಾಗಲಿಲ್ಲ, ಆದರೆ ಅವನು ಜಾಬಾನ್‌ನೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿರಲಿಲ್ಲ. ಆದಾಗ್ಯೂ, ಈ ಯುದ್ಧದಲ್ಲಿ, ಮುಸ್ಲಿಮರು ಸಹ ಬಹಳ ಉತ್ಸಾಹ ಮತ್ತು ಕೋಪದಿಂದ ಅವರ ವಿರುದ್ಧ ಬಂದರು ಮತ್ತು ಭೀಕರ ಯುದ್ಧ ನಡೆಯಿತು. (ತಾರಿಖ್ ಅಲ್-ತಬರಿ, ಸಂಪುಟ-2, ಪುಟ-313, ದಾರ್ ಅಲ್-ಕಿತಾಬ್ ಅಲ್-ಉಲಮಿಯಾ ಬೈರುತ್ 2012)

ಇರಾನ್‌ನ ಸೈನ್ಯದ ಉತ್ಸಾಹ ಮತ್ತು ಮುಸ್ಲಿಮರ ದುರ್ಬಲ ಸ್ಥಿತಿಯನ್ನು ಉಲ್ಲೇಖಿಸುತ್ತಾ, ಜೀವನಚರಿತ್ರೆಕಾರರು ಇರಾನ್ ಸೈನ್ಯದಲ್ಲಿ ಮೊದಲು ದಾಳಿ ಮಾಡಿದವರು ಕ್ರಿಶ್ಚಿಯನ್ನರು ಎಂದು ಬರೆಯುತ್ತಾರೆ, ಆದರೆ ಅವರ ನಾಯಕ ಮಾಲಿಕ್ ಬಿನ್ ಖೈಸ್ ಕೊಲ್ಲಲ್ಪಟ್ಟನು. ಅವನು ಕೊಲ್ಲಲ್ಪಡಲಿದ್ದನು ಆದ್ದರಿಂದ ಅವರೆಲ್ಲರು ನಿರಾಶಿತರಾದರು.

ಇದನ್ನು ಕಂಡ ಜಾಬಾನ್ ಇರಾನ್ ಸೈನ್ಯವನ್ನು ಮುಂದಕ್ಕೆ ತಳ್ಳಿದನು. ಬಹ್ಮನ್ ಹೊಸ ಬಲವರ್ಧನೆಗಳನ್ನು ತರುತ್ತಾನೆ ಎಂಬ ಭರವಸೆಯಲ್ಲಿ ಇರಾನಿಯನ್ನರು ಧೈರ್ಯದಿಂದ ಹೋರಾಡಿದರು. ಮುಸ್ಲಿಮರು ಮತ್ತೆ ಮತ್ತೆ ದಾಳಿ ಮಾಡಿದರು, ಆದರೆ ಪ್ರತಿ ಬಾರಿ ಇರಾನಿಯನ್ನರು ಬಹಳ ಧೈರ್ಯ ಮತ್ತು ಹಠದಿಂದ ಹೋರಾಡಿದರು ದಾಳಿ ವಿಫಲವಾಯಿತು. ಅಂತಿಮವಾಗಿ, ಹಝ್ರತ್ ಖಾಲಿದ್ ಬಿನ್ ವಲೀದ್(ರ) ತೀವ್ರ ಯುದ್ಧವಾಗುವ ಸಂಭಾವ್ಯತೆಯನ್ನು ಮನವರಿಕೆ ಮಾಡಿಕೊಂಡು ಸಾಮಗ್ರಿಗಳ ಕೊರತೆಯ ಬಗ್ಗೆ ವ್ಯಾಕುಲಗೊಂಡು ಹಝ್ರತ್ ಖಾಲಿದ್(ರ) ಹೀಗೆ ಪ್ರಾರ್ಥಿಸಿದರು: ಹೇ ಅಲ್ಲಾಹ್! ನೀನು ನನಗೆ ಶತ್ರುಗಳ ಮೇಲೆ ಜಯವನ್ನು ದಯಪಾಲಿಸಿದರೆ ನಾನು ಒಬ್ಬನೇ ಒಬ್ಬ ಶತ್ರುವನ್ನು ಜೀವಂತವಾಗಿ ಇರಿಸಲಾರೆ. ಈ ನದಿ ಅವರ ರಕ್ತದಿಂದ ಕೆಂಪಗಾಗುವುದು. ಅನಂತರ ಅವರು ಯುದ್ಧ ತಂತ್ರವನ್ನು ಬಳಸಿಕೊಂಡು ಎಡ ಭಾಗದಿಂದಲೂ ಬಲ ಭಾಗದಿಂದಲೂ ಇರಾನಿ ಸೈನ್ಯದ ಹಿಂಬಾಗದಲ್ಲಿ ಆಕ್ರಮಣ ಮಾಡಲು ಹೇಳಿದರು. ಆ ಕಾರಣದಿಂದ ಇರಾನಿ ಸೇನೆ ಚಲ್ಲಾಪಿಲ್ಲಿಯಾಗಿ ಚದುರಿ ಹೋಯಿತು. ಶತ್ರುಗಳನ್ನು ಹಿಡಿಗೂಡಲು ಅವರು ಆಜ್ಞಾಪಿಸಿದರು. ನೇರವಾಗಿ ಹೋರಾಡಿದವರನ್ನು ಹೊರತು ಬೇರೆ ಯಾರನ್ನೂ ಕೊಲ್ಲಬಾರದೆಂದು ಆಜ್ಞಾಪಿಸಿದರು. (ಸೀರತ್ ಸೈಯದುನಾ ಸಿದ್ದೀಕ್ ಅಕ್ಬರ್(ರ), ಪುಟ-671-672, ಉಮರ್ ಅಬುಲ್ ನಾಸರ್, ಅನುವಾದಕ) (ತಾರೀಖ್ ತಬರಿ ಉರ್ದು, ಸಂಪುಟ-2, ಪುಟ-564, ದಾರುಲ್ ಇಶಾಅತ್)

ಇದರ ಬಗ್ಗೆ ರೀಸರ್ಚ್ ಸೆಲ್‌ನ ಒಂದು ಟಿಪ್ಪಣಿ ಇದೆ ಮತ್ತು ನಾನು ಸಹ ಅದನ್ನು ನೋಡಿದ್ದೇನೆ. ಅದು ಸರಿ ಎನಿಸುತ್ತದೆ. ಇದನ್ನು ವಿವರಿಸುತ್ತಾ ತಾರೀಖ್ ತಬರಿ ಮತ್ತು ಬಹುತೇಕ ಜೀವನ ಚರಿತ್ರೆಗಾರರು ಹೀಗೆ ಹೇಳಿದ್ದಾರೆ: ಹಝ್ರತ್ ಖಾಲಿದ್(ರ) ತನ್ನ ಪ್ರತಿಜ್ಞೆ ಪ್ರಕಾರ ಒಂದು ರಾತ್ರಿ ಮತ್ತು ಒಂದು ಹಗಲು ಬಂಧಿಸಲ್ಪಟ್ಟವರನ್ನೆಲ್ಲಾ ಹತ್ಯೆ ಮಾಡಿ ನದಿಗೆ ಎಸೆದರು. ಆ ನದಿ ಕೆಂಪಗಾಯಿತು. ಆ ನದಿಯನ್ನು ಈಗ ಸಹ ನಹರುದ್ದಮ್ ಎಂದು ಕರೆಯಲಾಗುತ್ತಿದೆ. ಅಂದರೆ ರಕ್ತದ ಕಾಲುವೆ. (ತಾರಿಖ್ ಅಲ್-ತಬರಿ, ಸಂಪುಟ-2, ಪುಟ-314, ದಾರ್ ಅಲ್-ಕಿತಾಬ್ ಅಲ್-ಉಲಮಿಯಾ ಬೈರುತ್ 2012)

ಆದಾಗ್ಯೂ, ಕೈದಿಗಳನ್ನು ಕೊಂದು ನಂತರ ಕಾಲುವೆಯಲ್ಲಿ ರಕ್ತವನ್ನು ಎಸೆಯಲಾಯಿತು ಮತ್ತು ಜೀವನಚರಿತ್ರೆಕಾರರು ಸ್ವಲ್ಪ ಉತ್ಪ್ರೇಕ್ಷೆಯಿಂದ ತೊಡಗಿಸಿಕೊಂಡಿದ್ದಾರೆ ಎಂಬುದು ಸತ್ಯವೆಂದು ತೋರುತ್ತಿಲ್ಲ, ಅಥವಾ ಇಸ್ಲಾಮಿನ ಯುದ್ಧಗಳನ್ನು ಉದ್ದೇಶಪೂರ್ವಕವಾಗಿ ಕ್ರೂರ ಮತ್ತು ಅನಾಗರಿಕ ಮನಸ್ಸು ಮಾಡುವ ಸಾಧ್ಯತೆಯಿದೆ. ಅವರು ಸುಳ್ಳು ಕಥೆಗಳನ್ನು ಸೇರಿಸುವ ಹೊರೆಯನ್ನು ತೆಗೆದುಕೊಂಡಿದ್ದರು, ಅವರು ಅವಕಾಶ ದೊರೆತಾಗಲೆಲ್ಲ ತಮ್ಮ ಸ್ವಂತ ಕಡೆಯಿಂದ ಅಂತಹ ಘಟನೆಗಳನ್ನು ಸೇರಿಸಿದರು.

ಇತಿಹಾಸಕಾರರಲ್ಲಿ ಕೆಲವು ಶತ್ರುಗಳು ಇದ್ದರು, ಅಸೂಯೆ ಅಥವಾ ದ್ವೇಷದಿಂದ ಮುಸ್ಲಿಮರ ವಿರುದ್ಧ ಏನಾದರೂ ಬರೆಯುತ್ತಿದ್ದರು, ಅವರು ಕೈದಿಗಳನ್ನು ಕೊಂದು ಕಾಲುವೆಗೆ ಎಸೆದರು ಎಂದು ಬರೆದಿರಬಹುದು, ಆದರೆ ಮೇಲ್ನೋಟಕ್ಕೆ ಈ ರೀತಿಯದ್ದನ್ನು ಸೇರಿಸಲಾಗಿದೆ ಎಂದು ತೋರುತ್ತದೆ. ಮುಸ್ಲಿಮರು ಹೇಗೆ ತುಳಿತಕ್ಕೊಳಗಾದರು ಮತ್ತು ಅಮಾಯಕ ಕೈದಿಗಳನ್ನು ಹೇಗೆ ಕೊಲ್ಲಲಾಯಿತು ಎಂಬುದನ್ನು ಸುಳ್ಳು ಮತ್ತು ವಂಚನೆಯಿಂದ ಜನರಿಗೆ ಪ್ರಸ್ತುತಪಡಿಸಬಹುದು. ಮೊದಲಿಗೆ ಖೈದಿಗಳನ್ನು ಕೊಲ್ಲುವುದು ಆ ಸಮಯದ ನಿಯಮಗಳು ಮತ್ತು ಯುದ್ಧದ ಪ್ರಸ್ತುತ ತತ್ವಗಳ ಪ್ರಕಾರ ಆಕ್ಷೇಪಾರ್ಹ ವಿಷಯವಲ್ಲವಾದರೂ, ಇಸ್ಲಾಮಿಕ್ ಯುದ್ಧಗಳು, ವಿಶೇಷವಾಗಿ ಪವಿತ್ರ ಪ್ರವಾದಿ(ಸ) ಮತ್ತು ಖಿಲಾಫತ್ ಕಾಲಘಟ್ಟದಲ್ಲಿ, ನಿಜವಾಗಿಯೂ ಅಂತಹ ಕೈದಿಗಳನ್ನು ಈ ರೀತಿ ಕೊಲ್ಲಲಾಯಿತು ಎಂದು ಸಹ ಸಂಭವಿಸಲಿಲ್ಲ. ಈ ಯುದ್ಧಗಳಲ್ಲಿ ಬಲಿಯಾದವರ ಸಂಖ್ಯೆ ಸಾವಿರಾರು ಮತ್ತು ಮಿಲಿಯನ್‌ಗಳನ್ನು ತಲುಪಿದರೂ, ಅವರೆಲ್ಲರೂ ಯುದ್ಧದ ಸ್ಥಿತಿಯಲ್ಲಿ ಕೊಲ್ಲಲ್ಪಟ್ಟವರು. ನಾವು ಹಝ್ರತ್ ಖಾಲಿದ್ ಬಿನ್ ವಲೀದ್(ರ) ಅವರಂತಹ ಸೇನಾಧಿಪತಿಗಳ ಯುದ್ಧಗಳನ್ನು ಅಧ್ಯಯನ ಮಾಡಿದರೆ, ಸಾಧ್ಯವಾದಷ್ಟು ಮಟ್ಟಿಗೆ, ಅವರು ಶಸ್ತ್ರಾಸ್ತ್ರಗಳನ್ನು ತ್ಯಜಿಸಿದ ಅಥವಾ ವಿಧೇಯತೆಯನ್ನು ಸ್ವೀಕರಿಸಿದ ಮತ್ತು

ಯುದ್ಧಭೂಮಿಯಲ್ಲಿ ಕೊಲ್ಲಲ್ಪಟ್ಟ ಯಾರನ್ನಾದರೂ ಕೊಂದ ಪ್ರತಿಯೊಬ್ಬ ವ್ಯಕ್ತಿಯ ಪ್ರಾಣವನ್ನು ಉಳಿಸಿದರು. ಇತಿಹಾಸಕಾರರ ಪುರಾಣ, ಅವರ ಕೊಲೆಗಳಿಗೆ ಸೂಕ್ತ ಪುರಾವೆಗಳು ಮತ್ತು ಕಾರಣಗಳಿವೆ. ಹೀಗಾಗಿ, ಈ ಘಟನೆಯನ್ನು ನೋಡಿದರೆ ಇದು ಕೂಡ ಕಟ್ಟುಕಥೆ ಎಂದು ತೋರುತ್ತದೆ, ಏಕೆಂದರೆ ಈ ಸ್ಥಳಗಳ ಎಲ್ಲಾ ವಿವರಗಳನ್ನು ವಿವರಿಸುವ ಇತಿಹಾಸಕಾರರು ಮತ್ತು ಜೀವನಚರಿತ್ರೆಕಾರರು ವಿವರಿಸುವಾಗ ಪ್ರತಿಯೊಂದು ಸಣ್ಣ ವಿಷಯವನ್ನು ಪ್ರಸ್ತಾಪಿಸುತ್ತಾರೆ, ಅವರಲ್ಲಿ ಕೆಲವರು ಈ ಘಟನೆಯನ್ನು ಉಲ್ಲೇಖಿಸಲಿಲ್ಲ. ಆದ್ದರಿಂದ ಇದು ರಚಿಸಲಾದ ಕಥೆ ಎನ್ನುವುದಕ್ಕೆ ಪುರಾವೆಯಾಗಿದೆ. ಮತ್ತು ಇತಿಹಾಸವನ್ನು ಅತ್ಯಂತ ಮುಕ್ತ ಅಭಿಪ್ರಾಯದಿಂದ ನಿರೂಪಿಸುವ ಮತ್ತು ಅಂತಹ ವಿಷಯಗಳನ್ನು ಸಹ ಒಪ್ಪಲಾಗದಷ್ಟು ಪ್ರಶ್ನಾರ್ಹವಾಗಿ ನಿರೂಪಿಸುವ ಬರಹಗಾರ ಈ ಘಟನೆಯನ್ನು ಉಲ್ಲೇಖಿಸಿದ ನಂತರ ವರದಿಗಾರರು ಇದನ್ನು ವಿವರಿಸುವುದರಲ್ಲಿ ಉತ್ಪ್ರೇಕ್ಷೆಯಲ್ಲಿ ಮಿತಿ ಮೀರಿದ್ದಾರೆ ಎಂದು ಬರೆಯುತ್ತಾರೆ. ಅದು ಎಷ್ಟು ಖಚಿತವಾಗಿದೆ ಎಂದರೆ ಇಸ್ಲಾಮಿನ ಶತ್ರುಗಳನ್ನು ಕೊಲ್ಲುವಲ್ಲಿ ಖಾಲಿದ್(ರ) ಎಷ್ಟು ಹಿಂಸೆಯನ್ನು ಬಳಸಿದ್ದಾರೆ ಎಂದರೆ ಅದನ್ನು ಕಂಡು ಕಲ್ಕ ಮತ್ತು ಅವರ ಸಹಚಾರರಿಗೂ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. (ಹಝ್ರತ್ ಅಬು ಬಕರ್ ಸಿದ್ದಿಕ್(ರ), ಮತ್ತು ಹಝ್ರತ್ ಫಾರೂಕ್ ಆಝಂ(ರ), ಡಾ. ತಾಹಾ ಹುಸೇನ್, ಪುಟ 85–86)

ಅದೇ ರೀತಿ ಈ ಘಟನೆಯನ್ನು ಒಬ್ಬ ಲೇಖಕರು ಹೀಗೆ ವಿವರಿಸುತ್ತಾರೆ: ಅಂದರೆ ಖೈದಿಗಳೊಂದಿಗೆ ಕಠಿಣವಾಗಿ ವರ್ತಿಸಿದ್ದರು ಆದರೆ ಕೊಲ್ಲುವುದು ಸರಿಯಲ್ಲ. ಅದೇ ರೀತಿ ಇನ್ನೊಬ್ಬ ಲೇಖಕರು ಈ ಘಟನೆಯನ್ನು ಹೀಗೆ ವಿವರಿಸುತ್ತಾರೆ ಅದರಿಂದ ತಿಳಿದುಬರುತ್ತದೆ ಅಂದರೆ ಅಂತೆಯೇ, ಇರಾನಿಯನ್ನರನ್ನು ನಿಜವಾಗಿ ಕೊಲ್ಲಲ್ಪಟ್ಟರು ಮತ್ತು ಕಾಲುವೆಗೆ ಎಸೆಯಲ್ಪಟ್ಟಿಲ್ಲ ಎಂದು.

ಹೀಗಾಗಿ, ಹಝ್ರತ್ ಖಾಲಿದ್(ರ) ಕ್ರಿಶ್ಚಿಯನ್ನರ ಮೇಲೆ ದಾಳಿ ಮಾಡಲು ಪ್ರಾರಂಭಿಸಿದರು ಮತ್ತು ಇರಾನಿನ ಪಂಕ್ತಿಗಳನ್ನು ಅವರು ಜೇಡಿಮಣ್ಣಿನಿಂದ ಮಾಡಲ್ಪಟ್ಟಿದೆಯೇ ಹೊರತು ಮಾಂಸ ಮತ್ತು ರಕ್ತದಿಂದಲ್ಲ ಎಂಬ ರೀತಿಯಲ್ಲಿ ವರ್ತಿಸಿದರು ಎಂದು ಅವರು ಬರೆಯುತ್ತಾರೆ. ಇರಾನಿಯನ್ನರು ಬಹಳ ಉದ್ದವಾಗಿ ಹರಡಿಕೊಂಡಿದ್ದರಿಂದ, ಅವರು ಅರ್ಧವೃತ್ತವನ್ನು ಅರ್ಧಚಂದ್ರಾಕಾರದ ರೂಪದಲ್ಲಿ ರಚಿಸಿದರು ಮತ್ತು ಮುಸ್ಲಿಮರನ್ನು ಸುತ್ತುವರೆದರು. ಈಗ ಇರಾನಿಗಳು ಮತ್ತು ಕ್ರಿಶ್ಚಿಯನ್ ಅರಬ್ಬರು ಮುಸ್ಲಿಮರನ್ನು ಸುತ್ತುವರೆದು ಬಹಳ ಉತ್ಸಾಹದಿಂದ ಹೋರಾಡಲು ಪ್ರಾರಂಭಿಸಿದರು, ಆದರೆ ಮುಸ್ಲಿಮರು ಹೋರಾಡುವ ಉತ್ಸಾಹ ಕ್ರಿಶ್ಚಿಯನ್ನರಲ್ಲಿ ಇರಲಿಲ್ಲ.

ಪ್ರತಿಯೊಬ್ಬ ಮುಸಲ್ಮಾನನು ರಕ್ತಪಿಪಾಸು ಸಿಂಹನಾದನು ಮತ್ತು ಕ್ರಿಶ್ಚಿಯನ್ನರ ಮೇಲೆ ಕಳೆಗಳಂತೆ ಆಕ್ರಮಣ ಮಾಡಿದನು. ಇರಾನಿಯನ್ನರು ಮುಸ್ಲಿಮರನ್ನು ಸಹ ಹುತಾತ್ಮರಾಗಿ ಗಾಯಗೊಳಿಸುತ್ತಿದ್ದರೂ, ಮುಸ್ಲಿಮರು ಬಹಳ ಅಲ್ಪ ಪ್ರಮಾಣದಲ್ಲಿ ಬೀಳುತ್ತಿದ್ದರು ಮತ್ತು ಗಾಯಗೊಂಡವರು ಇನ್ನೂ ಹೆಚ್ಚಿನ ಉತ್ಸಾಹದಿಂದ ಹೋರಾಡುತ್ತಿದ್ದರು. ಇರಾನಿಯನ್ನರು ಹೆಚ್ಚಿನ ಪ್ರಮಾಣದಲ್ಲಿ ಸಾಯುತ್ತಿದ್ದರು, ಅವರ ಶವಗಳು ಮೈದಾನವು ತುಂಬಿಕೊಂಡಿತ್ತು. ಮತ್ತು ಯಾವುದೇ ಗಾಯಗೊಂಡ ಇರಾನಿಯನ್ ಯುದ್ಧಭೂಮಿಯನ್ನು ತೊರೆಯುತ್ತಿದ್ದನು. ಮುಸ್ಲಿಮರು ತುಂಬಾ ರಕ್ತಪಾತದಿಂದ ಅವರ ಬಟ್ಟೆಗಳು ರಕ್ತದಿಂದ ಕಲೆಯಾಗಿದ್ದವು. ಖಾಲಿದ್ ಬಿನ್ ವಲೀದ್(ರ) ಅವರ ಬಟ್ಟೆಯ ವಿಷಯವೂ ಸಹ ಅದೇ ಆಗಿತ್ತು. ಭೂಮಿಯು ಇರಾನಿಯನ್ನರ ರಕ್ತದಿಂದ ನೀರಾಯಿತು ಮತ್ತು ಹೆಚ್ಚುವರಿ ರಕ್ತವು ನೀರಿನಂತೆ ಹರಿಯಲಾರಂಭಿಸಿತು. ಅಂತಿಮವಾಗಿ, ಇರಾನಿಯನ್ನರು ಸೋಲಿಸಲ್ಪಟ್ಟರು ಮತ್ತು ಹತಾಶೆಯಿಂದ ಓಡಿಹೋದರು. ಮುಸ್ಲಿಮರು ಅವರನ್ನು ಹಿಂಬಾಲಿಸಿದರು ಮತ್ತು ದೂರದವರೆಗೆ ಅವರು ಕೊಲ್ಲಲು ಮತ್ತು ಸೆರೆಹಿಡಿಯಲು ಹೋದರು ಮತ್ತು ಇರಾನಿಯನ್ನರು ಎಂತಹ ಉನ್ಮಾದದಿಂದ ಓಡಿಹೋದರು ಎಂದರೆ ಅವರ ಸಾವಿರಾರು ಸೈನಿಕರು ನದಿಗೆ ಬಿದ್ದು ಮುಳುಗಿದರು. ಇರಾನಿಯನ್ನರು ಬಹಳ ದೂರ ಹೋದಾಗ ಮುಸ್ಲಿಮರು ಹಿಂದಿರುಗಿದರು. ಈ ಯುದ್ಧದಲ್ಲಿ ಎಪ್ಪತ್ತು ಸಾವಿರ ಇರಾನಿಯನ್ನರು ಕೊಲ್ಲಲ್ಪಟ್ಟರು. ನೂರ ಮೂವತ್ತೆಂಟು ಮುಸ್ಲಿಮರು ಹುತಾತ್ಮರಾದರು. ಆದಾಗ್ಯೂ, ಮುಸ್ಲಿಮರು ಇಷ್ಟು ದೊಡ್ಡ ಸಂಖ್ಯೆಯ ಇರಾನಿಯನ್ನರನ್ನು ಹೇಗೆ ಕೊಂದರು ಎಂದು ಇತಿಹಾಸಕಾರರು ಆಶ್ಚರ್ಯ ಪಡುತ್ತಾರೆ. (ಹಝ್ರತ್ ಖಾಲಿದ್ ಬಿನ್ ವಲೀದ್(ರ), ಸಾದಿಕ್ ಹುಸೇನ್ ಸಿದ್ದಿಕಿ, ಪುಟ–161–162)

ಇದನ್ನು ಇತಿಹಾಸಕಾರರೊಬ್ಬರು ಬರೆದಿದ್ದಾರೆ: ಈ ಹಿನ್ನೆಲೆಯಲ್ಲಿ ಕಾಲುವೆಯ ನೀರು ಕೆಂಪಾಗುತ್ತಿರುವ ಘಟನೆಯನ್ನು ನಿಜವೆಂದು ಒಪ್ಪಿಕೊಂಡರೂ ಕಾಲುವೆ ರಕ್ತದಿಂದ ಕೆಂಪಾಗಲು ಕಾರಣರಾದವರೇ ಗಾಯಾಳು ಸೈನಿಕರ ಪ್ರಾಣಾಪಾಯಕ್ಕೆ ಕಾರಣರಾಗಬೇಕು ಎಂಬುದು ಸ್ಪಷ್ಟವಾಗಿದೆ. ಆದ್ದರಿಂದ, ಅಂತಹ ಘಟನೆಗಳಲ್ಲಿ ಉತ್ಪ್ರೇಕ್ಷೆಯ ಮಿಶ್ರಣವನ್ನು ಸ್ವಲ್ಪಮಟ್ಟಿಗೆ ಸೇರಿಸಲಾಗಿದೆ ಎಂದು ಹೇಳಬಹುದು, ಇದರಿಂದಾಗಿ ಇಸ್ಲಾಮಿಕ್ ಯುದ್ಧಗಳು ಮತ್ತು ಹಝ್ರತ್ ಖಾಲಿದ್ ಬಿನ್ ವಲೀದ್(ರ)ರವರ ವ್ಯಕ್ತಿತ್ವದ ಮೇಲೆ ದಾಳಿ ಮಾಡಿದವರು ಅವಕಾಶವನ್ನು ಪಡೆದರು.

ಅಥವಾ ಮುಸ್ಲಿಮರನ್ನು ಯುದ್ಧಗಳಲ್ಲಿ ಕ್ರೂರವಾಗಿ ವರ್ತಿಸಿದರು ಎಂದು ಆರೋಪಿಸಲಾಗಿದೆ, ಆದರೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ, ಆದರೆ ಅದು ಒಂದೇ ಆರೋಪವಾಗಿದೆ ಎಂದು ಸ್ಪಷ್ಟವಾಗುತ್ತದೆ.

ಆದಾಗ್ಯೂ, ಶತ್ರುಗಳು ನಷ್ಟವನ್ನು ಅನುಭವಿಸಿದರು ಮತ್ತು ಅವನ ಸೈನ್ಯವು ಚದುರಿಹೋದಾಗ ಮತ್ತು ಮುಸ್ಲಿಮರು ಅವರನ್ನು ಬೆನ್ನಟ್ಟುವುದನ್ನು ಮುಗಿಸಿ ಹಿಂತಿರುಗಿದಾಗ, ಹಝ್ರತ್ ಖಾಲಿದ್(ರ) ಆಹಾರದ ಬಳಿಗೆ ಬಂದು ನಿಂತುಕೊಂಡು ಹೇಳಿದರು: ನಾನು ಇದನ್ನು ನಿಮಗೆ ನೀಡುತ್ತಿದ್ದೇನೆ, ಇದು ನಿಮಗಾಗಿ ಏಕೆಂದರೆ ಪೈಗಂಬರ್(ಸ) ರವರು ಯುದ್ಧಭೂಮಿಯಿಂದ ಪಲಾಯನಗೈಯುತ್ತಿರುವ ಶತ್ರುಗಳ ಸಿದ್ಧ ಆಹಾರವನ್ನು ಕಂಡು ತನ್ನ ಸೈನ್ಯಕ್ಕೆ ಆಹಾರವನ್ನು ವಿತರಿಸುತ್ತಿದ್ದರು. ಆದ್ದರಿಂದ ಮುಸ್ಲಿಮರು ಅದನ್ನು ಭೋಜನವಾಗಿ ತಿನ್ನಲು ಪ್ರಾರಂಭಿಸಿದರು. ಉಲ್ಲೈಸ್ ಯುದ್ಧದಲ್ಲಿ, ಈಗಾಗಲೇ ಹೇಳಿದಂತೆ ಶತ್ರುಗಳ ಎಪ್ಪತ್ತು ಸಾವಿರ ಜನರು ಕೊಲ್ಲಲ್ಪಟ್ಟರು.

(ತಾರಿಖ್ ಅಲ್–ತಬರಿ, ಸಂಪುಟ–2, ಪುಟ–314, ದಾರ್ ಅಲ್–ಕಿತಾಬ್ ಅಲ್–ಇಲ್ಮಿಯಾ, ಬೈರುತ್, 2012)

ಇಮ್‌ಗೀಶಿಯಾದ ಜಯದ ಬಗ್ಗೆ ಹೀಗೆ ಹೇಳಲಾಗಿದೆ. ಇರಾಖ್ ದೇಶದ ಒಂದು ಭಾಗವಾದ ಈ ಪ್ರದೇಶವನ್ನು ಹಿಜರಿ 12ರ ಸಫರ್ ತಿಂಗಳಲ್ಲಿ ಯುದ್ಧ ಮಾಡದೆ ಜಯಿಸುವಂತೆ ಅಲ್ಲಾಹನು ಮಾಡಿದನು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಹೊರಟಾಗ ಅಲ್ಲಿನ ಜನರು ಅಲ್ಲಿಂದ ಓಡಿಹೋದರು. ಅಲ್ಲಿ ಮುಸ್ಲಿಮರಿಗೆ ಎಷ್ಟು ಸಂಪತ್ತು ದೊರೆಯಿತು ಎಂದರೆ ಹಿಂದೆದೂ ಅಷ್ಟು ಲಭಿಸಿರಲಿಲ್ಲ.

ಉಲ್ಲೀಸ್ ಮತ್ತು ಇಮ್‌ಗೀಶಿಯಾದ ಜಯದ ಬಗ್ಗೆ ಬನೂ ಅಜಲ್ ಗೋತ್ರದ ಜುಂದಲ್ ಎಂಬವರ ಮೂಲಕ ಹಝ್ರತ್ ಅಬೂಬಕರ್(ರ)ರಿಗೆ ವರದಿ ತಲಪಿಸಲಾಯಿತು. ಆ ವ್ಯಕ್ತಿ ಹಝ್ರತ್ ಅಬೂಬಕರ್(ರ)ರೊಡನೆ ಯುದ್ಧಗಳಲ್ಲಿ ಲಭಿಸಿದ ಜಯದ ಬಗ್ಗೆ, ದೊರೆತ ಸಂಪತ್ತಿನ ಬಗ್ಗೆ, ಬಂಧಿತರ ಸಂಖ್ಯೆ, ವಿಶಿಷ್ಟವಾಗಿ ಹೋರಾಡಿದವರ ಬಗ್ಗೆ, ಹಝ್ರತ್ ಖಾಲಿದ್(ರ)ರ ಶೌರ್ಯದ ಬಗ್ಗೆ ವಿಶದವಾಗಿ ವಿವರಿಸಿದರು. ಆ ವಿವರಣೆಯನ್ನು ಹಝ್ರತ್ ಅಬೂಬಕರ್(ರ) ಬಹಳ ಮೆಚ್ಚಿದರು. ಅವರಿಗೆ ಒಬ್ಬ ಬಂಧಿತೆ ಮಹಿಳೆಯನ್ನು ದಾಸಿಯಾಗಿ ನೀಡಲಾಯಿತು. ಆಕೆಯ ಮೂಲಕ ಮಕ್ಕಳು ಜನಿಸಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಇನ್ನು ಮುಂದೆ ಖಾಲಿದ್ ಬಿನ್ ವಲೀದ್(ರ)ರಂತಹ ಮಕ್ಕಳನ್ನು ಮಹಿಳೆಯರು ಹೆರಲಾರರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–314–315, ದಾರುಲ್ ಕತುಬ್ ಇಲ್ಮಿಯ ಬೈರೂತ್ 2012) (ಹಝ್ರತ್ ಸಯ್ಯದುನಾ ಅಬೂಬಕರ್ ಸಿದ್ದೀಖ್(ರ), ಪುಟ–312, ಇಸ್ಲಾಮಿ ಕುತುಬ್ ಖಾನ) (ಮುಜಮುಲ್ ಬಲದಾನ್, ಸಂಪುಟ–1, ಪುಟ–301, ದಾರುಲ್ ಕುತುಬ್ ಇಲ್ಮಿಯ ಬೈರೂತ್) (ಮುಜಮುಲ್ ಬಲದಾನ್, ಸಂಪುಟ–3, ಪುಟ–309, ದಾರುಲ್ ಕುತುಬ್ ಇಲ್ಮಿಯ ಬೈರೂತ್)

ಉಳಿದ ಭಾಗ ಇನ್‌ಶಾಲ್ಲಾಹ್ ಮುಂದಿನ ಖುತ್‌ಬದಲ್ಲಿ ವಿವರಿಸುವೆನು.

*********

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಖಂಡಿತವಾಗಿಯೂ ಅವರು ತಫ್ಸೀರ್ ಬರೆಯುವುದರಲ್ಲಿ ಸಹ ಹಿಂದೆ ತೋರಿಸಿದ ಪುಕ್ಕಲುತನ ದೂರವಾಡಿ ನೇರವಾಗಿ ನನ್ನ ಎದುರಿಗೆ ಬರಬಹುದು. ಆದರೆ ನಾಳೆ ದಿನ ಹಾಗೆ ನಮಗೆ ಭೇಸ್ ಗ್ರಾಮದಿಂದ ಪೀರ್ ಮೆಹರ್ ಅಲಿ ಅವರ ಕೃತಿಗಳ ಬಗ್ಗೆ ತಿಳಿಯಿತು. ಅದರ ವಿವರಣೆ ಟಿಪ್ಪಣಿಯಲ್ಲಿ ಬರೆಯಲಾಗಿದೆ. ಆಗಿನಿಂದ ನಾವು ಹೀಗೆ ತಿಳಿಯುವಂತೆ ಆಗಿದೆ. ಪೀರ್ ಸಾಹೇಬರು ಮರಣ ಹೊಂದಿದ್ದಾರೆ. ಈಗ ಅವರನ್ನು ಸಂಬೋಧಿಸಿದ್ದು ಸಹ ಅವರಿಗೆ ಯೋಗ್ಯವಲ್ಲದ ಮರ್ಯಾದೆ ನೀಡಿದಂತಾಗುವುದು. ಆದರೆ ನಾವು ಪ್ರಾರಂಭಿಸಿದ ವಿಷಯವೊಂದು ಪರಿಣಾಮಕಾರಿಯಾಗಿಸುವುದು ಉತ್ತಮ ಎಂದು ಭಾವಿಸಿದೆವು.

(ನುಝೂಲುಲ್ ಮಸೀಹ್, ರೂಹಾನಿ ಖಝಾಇನ್, ಸಂಪುಟ–18, ಪುಟ 445–452)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಇಜಾಝಿ ಅಹ್ಮದಿ ಅನುಬಂಧ ನುಝೂಲುಲ್ ಮಸೀಹ್ ನಲ್ಲಿ 533 ಕವನ ಸಾಲುಗಳನ್ನು ಒಳಗೊಂಡ ಒಂದು ಖಸೀದ ಬರೆದರು. ಅದರ ಹೆಸರು **"ಅಲ್‌ಖಸೀದತುಲ್ ಇಜಾಝಿಯ"** ಅಂದರೆ ಈ ಖಸೀದ ಅಲ್ಲಾಹನ ಅನುಗ್ರಹ ಹಾಗೂ ಕೃಪೆಯಿಂದ ಎಂತಹ ಪವಾಡವಾಗಿದೆ ಎಂದರೆ ಸಂಖ್ಯೆಯ ನೆಲೆಯಲ್ಲೂ ಮತ್ತು ಸಾಹಿತ್ಯದ ನೆಲೆಯಲ್ಲೂ ಯಾರೂ ಸಹ ಅದರ ಬದಲು ರೂಪ ತರಲು ಸಾಧ್ಯವಾಗುವುದಿಲ್ಲ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಗ್ರಂಥದ ತಲೆಬರಹದಲ್ಲೇ ಬರೆದರು.

ಅಲ್‌ಹಮ್ದುಲಿಲ್ಲಾಹ್ ಅನುಬಂಧ ನುಝುಲುಲ್ ಮಸೀಹ್ ಅದರ ಜೊತೆಯಲ್ಲಿ ಹತ್ತು ಸಾವಿರ ರೂಪಾಯಿಗಳ ಜಾಹೀರಾತು ಇದೆ. ಮೌಲ್ವಿ ಸನಾವುಲ್ಲಾಹ್ ಬೇಡಿಕೆ ಅನುಸಾರ ಕೇವಲ ಐದು ದಿನಗಳಲ್ಲಿ (8 ನವೆಂಬರ್ 1902 ರಿಂದ) ತಯಾರುಗೊಂಡಿತು. ಅದನ್ನು ಇಜಾಝ್ ಅಹ್ಮದಿ ಎಂದು ಹೆಸರಿಸಲಾಯಿತು. ಈ ಪತ್ರಿಕೆಯಲ್ಲಿ ಪೀರ್ ಮೆಹರ್ ಅಲಿ ಶಾ ಸಾಹಿಬ್ ಮತ್ತು ಮೌಲ್ವಿ ಅಸ್ಗರ್ ಅಲಿ ಸಾಹಿಬ್ ಮತ್ತು ಮೌಲ್ವವಿ ಅಲಿ ಹಾಯರಿ ಸಾಹಿಬ್ ಶಿಯಾ ಮುಂತಾದವರು ಸಹ ಸಂಬೋಧಿತರಾಗಿದ್ದಾರೆ. ಅವರ ಹೆಸರುಗಳು ಪತ್ರಿಕೆಯಲ್ಲಿ ನಮೂದಿತವಾಗಿವೆ."

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಮೌಲ್ವಿ ಸನಾವುಲ್ಲಾಹ್ ಅಮೃತ್ಸರಿ ಅವರಿಗೆ ಈ ಖಸೀದೆಯ ಪ್ರತಿರೂಪ ತಂದುಕೊಟ್ಟರೆ ಹತ್ತು ಸಾವಿರ ರೂಪಾಯಿಗಳ ಬಹುಮಾನ ಇಟ್ಟಿದ್ದರು. ಮೌಲ್ವಿ ಪೀರ್ ಮೆಹರ್ ಅಲಿ ಶಾ ಗೋಲ್ಡಡವಿ ಮತ್ತು ಅಲಿ ಹಾಯರಿ ಶಿಯಾ ಅವರಿಗಾಗಿ ಒಂದೊಂದು ನೂರು ರೂಪಾಯಿಗಳ ಬಹುಮಾನ ಘೋಷಿಸಿದರು. ಅದರ ವಿವರ ಅವರು ತಮ್ಮ ಕೃತಿ ನುಝೂಲುಲ್ ಮಸೀಹ್ ರೂಹಾನಿ ಕಝಾಇನ್ ಸಂಪುಟ–18 ರ 445 ರಿಂದ 450 ಪುಟಗಳಲ್ಲಿ ವಿವರಿಸಿರುತ್ತಾರೆ.

ಸಯ್ಯದದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪೀರ್ ಮೆಹರ್ ಅಲಿ ಶಾ ಗೋಲ್ಡವಿ ಮತ್ತು ಅಲಿ ಹಾಯರಿ ಶಿಯಾ ಅವರ ಬಗ್ಗೆ ಹೇಳಿದರು. ಅಂದಹಾಗೆ ಈ ದಿನಗಳಲ್ಲಿ ಮೌಲ್ವಿ ಮುಹಮ್ಮದ್ ಹುಸೇನ್ ಅವರು ಮೆಹರ್ ಅಲಿ ಗೋಲ್ಡವಿ ಅವರ ಶೈಕ್ಷಣಿಕ ಅರ್ಹತೆ ಕುರಿತು ತನ್ನ "ಇಶಾಅತುಸಿನಾ" ದಲ್ಲಿ ಬಹಳಷ್ಟು ಪ್ರಶಂಸೆ ಮಾಡಿದ್ದರು. ಅಲಿ ಹಾಯರಿ ಸಾಹಿಬ್ ಶಿಯಾ ತನ್ನ ಬಣ್ಣನೆಯಲ್ಲಿ ತೇಲಾಡುತ್ತಿದ್ದರು. ಆದುದರಿಂದ ಆನು ಅವರಿಗೂ ಸಹ ಈ ಸ್ಪರ್ಧೆಯಲ್ಲಿ ಕರೆ ನೀಡಿದೆನು. ಬಯ್ಯುವುದರಲ್ಲಿ ಮತ್ತು ಅಪಹಾಸ್ಯ ಮಾಡುವುದರಲ್ಲಿ ಆ ಜನರ ನಾಲಿಗೆ ಬಹಳ ಉದ್ದವಾಗಿದೆ. ಆದರೆ ಈಗ ನಾನು ನೋಡುವೆನು. ಅಲ್ಲಾಹನ ಸಹಾಯ ಅವರಿಗೆ ಎಷ್ಟರಮಟ್ಟಿಗೆ ದೊರೆಯುತ್ತದೆ. ನಾನು ಆ ಜನರ ಬಗ್ಗೆಯೂ ಸಹ ಈ ಖಸೀದದಲ್ಲಿ ಒಂದಿಷ್ಟು ಬರೆದಿರುವೆನು. ಅದರಿಂದ ಅವರ ಅಭಿಮಾನ ಜಾಗೃತಗೊಳ್ಳಲು ಇದೊಂದು ಕೊನೆಯ ತೀರ್ಪಾಗಿದೆ. ಶಿಯಾ ಹುಸೇನರಿಂದ ಸಹಾಯ ಪಡೆಯಲಿ ಮತ್ತು ಗೋಲಡವಿ ಸಾಹಿಬ್ ತನ್ನ ಯಾವುದೇ ಗುರುವಿನಿಂದ, ಬಯ್ಯುವ ಚಾಳಿಯಿಂದ ಹಾಗೂ ಅಪಹಾಸ್ಯ ಮಾಡುವ ಚಾಳಿಯಿಂದ ಯಾರೂ ದೂರವಿರುವುದಿಲ್ಲ ಮತ್ತು ಅಪಮಾನಿಸುವ ಹವ್ಯಾಸ ಬಿಡುವುದಿಲ್ಲ ಮತ್ತು ಪ್ರತಿಯೊಂದು ಸಭೆಯಲ್ಲಿ ನನ್ನ ದೃಷ್ಟಾಂತಗಳನ್ನು ಧಿಕ್ಕರಿಸುತ್ತಾನೆ. ಅವರಿಗೆ ಅವಧಿ ನಿಗದಿಪಡಿಸಿ ಈ ದೃಷ್ಟಾಂತದದ ಪ್ರತಿರೂಪ ತರಬೇಕಾಗಿದೆ. ಇಲ್ಲದಿದ್ದರೆ ಸದಾಕಾಲಕ್ಕಾಗಿ ಮತ್ತು ಲೋಕವನ್ನು ತ್ಯಜಿಸುವವರೆಗೆ ವಿವರಿಸಿದ ಕೆಳಗಿನ ಶಾಪಗಳು ಅವರ ಮೇಲೆ ಆಕಾಶದಿಂದ ಬೀಳುತ್ತಿರುವುದು. ಆ ಶಾಪಗಳು ಇಂತಿವೆ. (1) ಶಾಪ (2) ಶಾಪ 3) ಶಾಪ 4) ಶಾಪ (5) ಶಾಪ 6) ಶಾಪ 7) ಶಾಪ (8) ಶಾಪ (9) ಶಾಪ (10) ಶಾಪು ವ ತಿಲ್ಕ ಅಶರತುನ್ ಕಾಮಿಲತುನ್. (ಇಜಾಝ್ ಅಹ್ಮದಿ, ಅನುಬಂಧ ನುಝೂಲುಲ್ ಮಸೀಹ್, ರೂಹಾನಿ ಖಝಾಇನ್, ಸಂಪುಟ–19, ಪುಟ–148–149)

**ಮುಂದೆ ಯಾರಾದರೂ ನನಗೆ ಸುಳ್ಳುಗಾರ ಎಂದು ಸಾರಬೇಕಾದರೆ ಅವನಿಗೆ ನನ್ನ ದೃಷ್ಟಾಂತಗಳನ್ನು ಎದುರಿಸುವುದು ಅನಿವಾರ್ಯವಾಗಿರುವುದು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಬಯ್ಗುಳಗಳು ಮತ್ತು ಧಿಕ್ಕಾರ ವಿಪರೀತಕ್ಕೆ ತಲುಪಿದೆ. ಆ ಪತ್ರಗಳು ನನ್ನ ಬಳಿ ಒಂದು ಚೀಲದಲ್ಲಿ ಸಂರಕ್ಷಿತವಾಗಿವೆ. ಈ ಜನರು ತನ್ನ ಜಾಹೀರಾತುಗಳಲ್ಲಿ ಪದೇ ಪದೆ ಗತಿಸಿದ ದೃಷ್ಟಾಂತಗಳನ್ನು ಸುಳ್ಳಾಗಿಸುತ್ತಾರೆ ಮತ್ತು ಭವಿಷ್ಯದಲ್ಲಿ ದೃಷ್ಟಾಂತಗಳನ್ನು ಕೇಳುತ್ತಾರೆ. ಆದುದರಿಂದ ನಾವು ಈ ದೃಷ್ಟಾಂತ ಅವರಿಗೆ ನೀಡುತ್ತಿದ್ದೇವೆ. ಹಾಗೆ ಕ್ರೈಸ್ತರು ಸಹ ನನಗೆ ಸಂಬೋಧಿಸಿ ಬರೆದಿದ್ದರು. ಇಂಜೀಲಿನಲ್ಲಿ ಸುಳ್ಳು ಮಸೀಹರು ಬರುವರು ಎಂದಿದೆ, ಆದ್ದರಿಂದ ಅವರು ನನ್ನನ್ನು ಸುಳ್ಳು ಮಸೀಹನೆಂದು ಸಾರಿದ್ದಾರೆ. ಅದಾಗ್ಯೂ ಸ್ವಯಂ ಈ ದಿನಗಳಲ್ಲಿ ಲಂಡನ್‌ನಲಿ ರೈಸ್ತರಲ್ಲಿ ಸುಳ್ಳು ಮಸೀಹನೆಂದು ಹೆಸರು ನಮೂದಿತವಾಗಿದೆ, ಯಾರು ದೇವನೆಂದು ಮತ್ತು ಮಸೀಹನ ದಾವೆ ಮಾಡುವನು ಮತ್ತು ಇಂಜೀಲಿನ ಭವಿಷ್ಯವಾಣಿ ಪೂರ್ಣಗೊಳಿಸುವನೆಂದು. ಆದರೆ ಮುಂದೆ ಯಾರಾದರೂ ನನಗೆ ಸುಳ್ಳುಗಾರನೆಂದು ಸಾರಬಯಸುವುದಾದರೆ ಅವನಿಗೆ ನನ್ನ ಎದುರಿನಲ್ಲಿ ದೃಷ್ಟಾಂತಗಳನ್ನು ತೋರಿಸುವುದು ಅನಿವಾರ್ಯವಾಗುವುದು. ಕ್ರೈಸ್ತರಲ್ಲೂ ಸಹ ಹಲವು ತಪ್ಪಿತಸ್ಥರು ಮೌಲ್ವಿಯಾಗುವ ದಾವೆ ಮಾಡುತ್ತಾರೆ. ಪಾದರಿ ಸಾಹೇಬರುಗಳು ಅವರನ್ನು ಧಿಕ್ಕರಿಸುವುದರಲ್ಲಿ ಸತ್ಯವಂತರೆಂದಾದರೆ, ಅವರು ಇಂತಹ ಖಸೀದ ಆ ಮೌಲ್ವಿಗಳಿಂದ ಐದು ದಿನಗಳಲ್ಲಿ ಬರೆಸಿ ಹತ್ತು ಸಾವಿರ ರೂಪಾಯಿಗಳು ನನ್ನಿಂದ ಪಡೆಯಲಿ ಮತ್ತು ತನ್ನ ಮಿಷನರಿಯ ಕಾರ್ಯಗಳಲ್ಲಿ ಖರ್ಚು ಮಾಡಲಿ. ಆದರೆ ಯಾವ ವ್ಯಕ್ತಿ ತಾರೀಖು ನಿಗದಿಪಡಿಸಿದ ನಂತರ ಏನೆಲ್ಲ ಬೊಗಳಿದರೆ ಅಥವಾ ಯಾವುದೇ ಬರಹ ತೋರಿಸಿದರೆ, ಆ ಬರಹ ಕಲುಷಿತ ನಾಲೆಯುಲ್ಲಿ ಬಿಸಾಕುವ ಯೋಗ್ಯವಾಗಿರುವುದು.

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 11ರ ಉಳಿದ ಭಾಗ)*

ಮೇಲೆ ಈ ಪರಿಣಾಮವನ್ನು ಬೀರುತ್ತದೆ. ಈ ಬೋಧನೆಯನ್ನು ಸ್ವೀಕರಿಸಿದ ಪರಿಣಾಮವಾಗಿ ನಾವು ಅಲ್ಲಾಹನನ್ನು ಕಂಡುಕೊಂಡೆವು ಮತ್ತು ಎಲ್ಲಿಂದ ಎಲ್ಲಿಗೆ ತಲುಪಿದೆವು. ಈ ರೀತಿಯಾಗಿ, ಸರ್ವಶಕ್ತನಾದ ಅಲ್ಲಾಹನು ಆ ಸಮಯದಲ್ಲಿ ಅವಿಶ್ವಾಸಿಗರನ್ನು ನಾಚಿಕೆ ಪಡಿಸುತ್ತಾನೆ, ನೋಡಿ ನಮ್ಮ ಈ ಪ್ರವಾದಿಯು ಈ ಆಧ್ಯಾತ್ಮಿಕ ಶಕ್ತಿಗಳನ್ನು ಪಡೆದು ಎಲ್ಲಿಂದ ಎಲ್ಲಿಗೆ ತಲುಪಿದನು ಆದರೆ ನೀವು ಆ ಶಕ್ತಿಗಳನ್ನು ನಿರಾಕರಿಸಿ ಎಲ್ಲಿಂದ ಎಲ್ಲಿಗೆ ತಲುಪಿದ್ದೀರಿ.

ಪ್ರತಿಯೊಬ್ಬ ಪ್ರವಾದಿಯು ದೈವಿಕ ಪದದ ಫಲಿತಾಂಶದ ಪ್ರಾಯೋಗಿಕ ಉದಾಹರಣೆಯಾಗಿದೆ, ಅದಕ್ಕಾಗಿಯೇ ಪ್ರವಾದಿಯಿಲ್ಲದೆ ಪದವು ಬರುವುದಿಲ್ಲ. ವಾಕ್ಯದ ಮಹಿಮೆಯು ಪ್ರವಾದಿಯಿಂದ ಮತ್ತು ಪ್ರವಾದಿಯ ಮಹಿಮೆಯು ಪದದಿಂದ ತಿಳಿಯುತ್ತದೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–214, ಪ್ರಕಟಿತ 2010 ಖಾದಿಯಾನ್)**

**MUSLIM TELEVISION AHMADIYYA INTERNATIONAL**
**www.mta.tv**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**ಈದ್ ಮತ್ತು ಜುಮುಅ ಒಂದೇ ದಿನ ಬಂದರೆ, ಅದರ ಬಗ್ಗೆ**

ಪ್ರವಾದಿ ಮುಹಮ್ಮದ್(ಸ)ರ ಸುನ್ನತ್ ಮತ್ತು ಖುಲಫಾ ಎ ರಾಶಿದೀನ್ ಹಾಗೂ ಪ್ರವಾದಿ(ಸ) ಅವರ ಸಹಾಬರವರ ನಂಬಿಕೆಯು ಹೀಗಿತ್ತು ಅಂದರೆ ಅವರೆಲ್ಲರೂ ಅಂದು ಈದ್ ನಮಾಝ್ ನಿರ್ವಹಿಸಿದ ನಂತರ ಜುಮುಅದ ನಮಾಝನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಿದರು.

ಹಾಗೂ ದೂರದ ಪ್ರದೇಶಗಳಿಂದ ಬರುವವರಿಗೆ ಜುಮುಅದ ನಮಾಝಿನಲ್ಲಿ ಬಿಡುವು ನೀಡಿ, ಅವರವರ ಪ್ರದೇಶದಲ್ಲೇ ಝುಹರ್ ನಮಾಝನ್ನು ನಿರ್ವಹಿಸುವಂತೆ ಸೂಚನೆ ನೀಡಿದರು.

**ಆದ್ದರಿಂದ, ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದರೆ, ಈದ್ ನಮಾಝ್ ನಿರ್ವಹಿಸಿದ ನಂತರ ಒಂದು ವೇಳೆ ಜುಮುಅ ನಮಾಝ್ ನಿರ್ವಹಿಸದಿದ್ದರೆ ಝುಹರ್ ನಮಾಝನ್ನು ಅದರ ಸಮಯದಲ್ಲಿ ನಿರ್ವಹಿಸಬೇಕು.**

---

ನಮಾಝ್ ಮತ್ತು ಉಪವಾಸವು ಆರಾಧನೆಯ ಭೌತಿಕ ಕ್ರಿಯೆಗಳಾಗಿವೆ, ಆದ್ದರಿಂದ ಅವರ ಪ್ರತಿಫಲವು ಈ ಆರಾಧನೆಯ ಕಾರ್ಯಗಳನ್ನು ನಿರ್ವಹಿಸುವ ವ್ಯಕ್ತಿಯನ್ನು ತಲುಪುತ್ತದೆ.

ಆದ್ದರಿಂದ, ನಮ್ಮ ಪ್ರಕಾರ, ಸತ್ತವರ ಪರವಾಗಿ ನಮಾಝ್ ನಿರ್ವಹಿಸುವುದು ಮತ್ತು ಉಪವಾಸ ಮಾಡುವುದು ಸತ್ತವರ ಮಕ್ಕಳ ಜವಾಬ್ದಾರಿಯಲ್ಲ

ಆದಾಗ್ಯೂ, ಸತ್ತವರ ಪರವಾಗಿ ಅಲ್ಲಾಹನ ಸೃಷ್ಟಿಗೆ ಪ್ರಯೋಜನವನ್ನು ನೀಡುವ ಏನನ್ನಾದರೂ ಕೆಲಸ ಮಾಡಿದರೆ ಅದು ಸದಖ ಜಾರಿಯ ಎಂದು ಪರಿಗಣಿಸಲಾಗುತ್ತದೆ, ಅದರ ಪ್ರತಿಫಲವು ಸತ್ತವರಿಗೆ ತಲುಪುತ್ತದೆ.

ಹದೀಸ್ ಗ್ರಂಥಗಳಲ್ಲಿ, ಹಝ್ರತ್ ಆಯಿಷಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ಸತ್ತವರ ಪರವಾಗಿ ಉಪವಾಸ ಮಾಡ ಬೇಡಿ ಎಂಬ ವರದಿಗಳು ದೊರೆಯುತ್ತದೆ ಆದರೆ ಅವರ ಪರವಾಗಿ ಆಹಾರ ತಿನ್ನಿಸಿರಿ ಎಂಬ ಉಲ್ಲೇಖಗಳಿವೆ.

## ಸಯ್ಯಿದುನಾ ಹಝ್ರತ್ ಅಮೀರುಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ಕೇಳಲಾದ ಪ್ರಶ್ನೆಗಳಿಗೆ ವಿಶ್ವಾಸ ವರ್ಧಕ ಉತ್ತರಗಳ

**ಗಮನಿಸಿ:** ಸಯ್ಯಿದುನಾ ಹಝ್ರತ್ ಅಮೀರಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ವಿವಿಧ ಸಂದರ್ಭಗಳಲ್ಲಿ ಪತ್ರಗಳಲ್ಲಿ ಹಾಗೂ ಎಂ.ಟಿ.ಎ ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಖ ಸಮಸ್ಯೆಗಳ ಬಗ್ಗೆ ಕೇಳಲಾದ ಪ್ರಶ್ನೆಗಳ ಬಗ್ಗೆ ನೀಡಿದ ಮಾರ್ಗದರ್ಶನ ಹಾಗೂ ಉತ್ತರಗಳನ್ನು ಓದುಗರ ಅನುಕೂಲಕ್ಕಾಗಿ ಅಲ್-ಫ಼ಜಲ್ ಇಂಟರ್ನ್ಯಾಷನಲ್‌ಗೆ ಧನ್ಯವಾದಗಳೊಂದಿಗೆ ಪ್ರಕಟಿಸಲಾಗುತ್ತಿದೆ. (ಸಂಸ್ಥೆ)

**ಪ್ರಶ್ನೆ:** ಹುಝೂರ್ ಅನ್ವರ್(ಅತಬಿಅ) ಅವರ ಸೇವೆಯಲ್ಲಿ ಮಹಿಳೆಯೊಬ್ಬರು ಹನ್ನೆರಡು ಗಂಟೆಯಿಂದ ಒಂದು ಗಂಟೆಯವರೆಗೆ ಮತ್ತು ಸೂರ್ಯ ಉದಯಿಸುವಾಗ ಪವಿತ್ರ ಖುರ್‌ಆನ್ ಅನ್ನು ಏಕೆ ಪಠಿಸಬಾರದು? ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಅವರು ಮೇ 16, 2021 ರ ತಮ್ಮ ಪತ್ರದಲ್ಲಿ ಈ ಪ್ರಶ್ನೆಗೆ ಈ ಕೆಳಗಿನ ಉತ್ತರವನ್ನು ನೀಡಿದ್ದಾರೆ:

**ಉತ್ತರ:** ನಿಮ್ಮ ಪತ್ರದಲ್ಲಿ ಉಲ್ಲೇಖಿಸಲಾದ ಸಮಯದಲ್ಲಿ ಪವಿತ್ರ ಖುರ್‌ಆನ್ ಓದುವುದನ್ನು ಎಲ್ಲಿಯೂ ನಿಷೇಧಿಸಲಾಗಿಲ್ಲ. ಆದಾಗ್ಯೂ, ದಿನದ ಮೂರು ಸಮಯಗಳಲ್ಲಿ (ಸೂರ್ಯನು ಉದಯಿಸುವಾಗ, ಸೂರ್ಯ ಮುಳುಗಿದಾಗ ಮತ್ತು ಮಧ್ಯಾಹ್ನದ ಸಮಯದಲ್ಲಿ ಸೂರ್ಯನು ತಲೆಯ ಮೇಲಿರುವಾಗ), ಪವಿತ್ರ ಪ್ರವಾದಿ(ಸ) ನಮಾಝನ್ನು ನಿರ್ವಹಿಸಲು ನಿಷೇಧಿಸಿದರು ಮತ್ತು ಪ್ರವಾದಿ(ಸ) ಈ ನಿಷೇಧದ ಕಾರಣವನ್ನು ಸಹ ವಿವರಿಸಿದ್ದಾರೆ. ಅಂದರೆ, ನಾನು ಹೇಳಿದೆ, ಓ ಅಲ್ಲಾಹನ ಪ್ರವಾದಿಯವರೇ! ಸರ್ವಶಕ್ತನಾದ ಅಲ್ಲಾಹನು ನಿಮಗೆ ಕಲಿಸಿದ ವಿಷಯಗಳ ಬಗ್ಗೆ ಹೇಳಿ ಅದರ ಬಗ್ಗೆ ನನಗೆ ಅರಿವಿಲ್ಲ. ನನಗೆ ನಮಾಝಿನ ಬಗ್ಗೆ ಹೇಳಿ. ಪ್ರವಾದಿ(ಸ) ಹೇಳಿದರು: "ಬೆಳಿಗ್ಗೆ ಪ್ರಾರ್ಥನೆಯನ್ನು ಮಾಡಿ, ನಂತರ ಸೂರ್ಯೋದಯವಾಗುವ ಮತ್ತು ಉದಯಿಸುವವರೆಗೆ ಪ್ರಾರ್ಥನೆಯಿಂದ ದೂರವಿರಿ, ಏಕೆಂದರೆ ಅದು ಉದಯಿಸುವಾಗ, ಅದು ಸೈತಾನನ ಎರಡು ಕೊಂಬುಗಳ ನಡುವೆ ಹೊರಹೊಮ್ಮುತ್ತದೆ, ಮತ್ತು ಆ ಸಮಯದಲ್ಲಿ (ಕುಫ್ಫಾರರು) ಧಿಕ್ಕಾರಿಗಳು ಅದರ ಮುಂದೆ ಸಾಷ್ಟಾಂಗವೆರಗುತ್ತಾರೆ." ನಂತರ ನಮಾಝನ್ನು ನಿರ್ವಹಿಸಿರಿ, ಏಕೆಂದರೆ ಆ ಸಮಯದಲ್ಲಿ ನಮಾಝ್ ಸಾಕ್ಷಿಯಾಗಿದೆ ಮತ್ತು ನೆರಳು ಈಟಿಯ ಗಾತ್ರಕ್ಕೆ ಕಡಿಮೆಯಾಗುವವರೆಗೆ ಭಾಗವಹಿಸುತ್ತದೆ. ತದನಂತರ ನಮಾಝಿನಿಂದ ದೂರವಿರಿ, ಖಂಡಿತವಾಗಿಯೂ ಆ ಸಮಯದಲ್ಲಿ ನರಕವು ಹೊತ್ತಿಕೊಳ್ಳುತ್ತದೆ. ನಂತರ ನೆರಳು ಕ್ಷೀಣಿಸಿದಾಗ, ನಮಾಝ್ ನಿರ್ವಹಿಸು, ಏಕೆಂದರೆ ಆ ಸಮಯದಲ್ಲಿ ಪ್ರಾರ್ಥನೆಯು ಸಾಕ್ಷಿಯಾಗಿದೆ ಮತ್ತು ನೀವು ಅಸ್ರ್ ನಮಾಝನ್ನು ನಿರ್ವಹಿಸುವವರೆಗೆ ಹಾಜರಾಗುತ್ತಾರೆ. ತದನಂತರ ಸೂರ್ಯ ಮುಳುಗುವವರೆಗೆ ನಮಾಝಿನಿಂದ ದೂರವಿರಿ, ಏಕೆಂದರೆ ಆ ಸಮಯದಲ್ಲಿ ಸೂರ್ಯನು ಸೈತಾನನ ಎರಡು ಕೊಂಬುಗಳ ನಡುವೆ ಅಸ್ತಮಿಸುತ್ತಾನೆ ಮತ್ತು ಆ ಸಮಯದಲ್ಲಿ ಅವಿಶ್ವಾಸಿಗಳು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ.

ಆದ್ದರಿಂದ ಈ ಮೂರು ಸಮಯದಲ್ಲಿ ಪ್ರಾರ್ಥನೆ ಮಾಡುವುದನ್ನು ನಿಷೇಧಿಸಲಾಗಿದೆ. ಆದರೆ ಪವಿತ್ರ ಖುರ್‌ಆನ್ ಓದಲು ಯಾವುದೇ ನಿಷೇಧವಿಲ್ಲ. ಆದ್ದರಿಂದ, ನೀವು ಬಯಸಿದಾಗ ನೀವು ಖಂಡಿತವಾಗಿಯೂ ಪವಿತ್ರ ಖುರ್‌ಆನ್ ಅನ್ನು ಓದಬಹುದು, ಯಾವುದೇ ನಿರ್ಬಂಧವಿಲ್ಲ.

**ಪ್ರಶ್ನೆ:** ಸ್ನೇಹಿತರೊಬ್ಬರು ಹುಝೂರ್ ಅನ್ವರ್(ಅತಬಿಅ) ಅವರನ್ನು Short Sellingನ ಹಲಾಲ್ ಮತ್ತು ಹರಾಮ್‌ನ ಬಗ್ಗೆ ಮಾರ್ಗದರ್ಶನ ನೀಡುವಂತೆ ಕೇಳಿದ್ದಾರೆ? ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಅವರು 16 ಮೇ 2021 ರ ಪತ್ರದಲ್ಲಿ ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ. ಹುಝೂರ್ ಅನ್ವರ್(ಅತಬಿಅ) ಹೇಳಿದರು:

**ಉತ್ತರ:** ವಾಸ್ತವವಾಗಿ, Short Selling ಅನ್ನು ತ್ವರಿತ ಹಣವನ್ನು ಗಳಿಸುವ ಸುಲಭವಾದ ಮಾರ್ಗವೆಂದು ಪರಿಗಣಿಸಲಾಗುತ್ತದೆ, ಇದರಲ್ಲಿ ಕೆಲವರು ಷೇರುಗಳನ್ನು ದಲ್ಲಾಳಿಗಳಿಂದ ಸಾಲವಾಗಿ ಪಡೆದು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ ಮತ್ತು ನಂತರ ಷೇರುಗಳು ಅಗ್ಗವಾದಾಗ ಮಾರುಕಟ್ಟೆಯಿಂದ ಖರೀದಿಸಿ ದಲ್ಲಾಳಿಗಳಿಗೆ ಹಿಂದಿರುಗಿಸುತ್ತಾರೆ. ಪರಿಣಾಮವಾಗಿ, ಅವರು ಲಾಭದ ಒಂದು ಭಾಗವನ್ನು ಗಳಿಸುತ್ತಾರೆ ಮತ್ತು ದಲ್ಲಾಳಿಗಳಿಗೆ ಒಂದು ಭಾಗವನ್ನು ಕಮಿಷನ್ ಆಗಿ ನೀಡುತ್ತಾರೆ.

ಇಸ್ಲಾಂ ಧರ್ಮವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಮನುಷ್ಯನಿಗೆ ಮಾರ್ಗದರ್ಶನ ನೀಡಿದಂತೆ, ಸ್ಪಷ್ಟ ಮತ್ತು ನೇರವಾದ ಮಾರ್ಗವನ್ನು ಹಿಡಿಯಲು ಮತ್ತು ವ್ಯವಹಾರದಲ್ಲಿ ಪ್ರಾಮಾಣಿಕವಾಗಿ ಮತ್ತು ಮೊಂಡುತನದಿಂದ ಮಾತನಾಡಲು ಸೂಚನೆ ನೀಡಿದ್ದಾರೆ. ಆದ್ದರಿಂದ, ನಿಮ್ಮ ವ್ಯವಹಾರದ ಸಾಮಗ್ರಿಗಳಲ್ಲಿ ಯಾವುದೇ ದೋಷವಿದ್ದರೆ ಅದನ್ನು ರಹಸ್ಯವಾಗಿಡಬೇಡಿ ಬದಲಿಗೆ ಈ ದೋಷವನ್ನು ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಿ ಎಂದು ಪವಿತ್ರ ಪ್ರವಾದಿ(ಸ) ವ್ಯಾಪಾರದ ವಿಷಯದಲ್ಲಿ ಸೂಚನೆ ನೀಡಿದರು. (ಸಾಹಿಹ್ ಮುಸ್ಲಿಂ, ಕಿತಾಬ್ ಅಲ್-ಇಮಾನ್ ಅಧ್ಯಾಯ ಮುನ್ ಘಷ್ಷಾ ಫಾಲಿಸ್ ಮಿನ್ನ) ಅಳತೆ ಮತ್ತು ತೂಕಯನ್ನು ಪೂರ್ಣವಾಗಿ ಇರಿಸಿ, ಅದರಲ್ಲಿ ಯಾವುದೇ ಕೊರತೆಯನ್ನು ಮಾಡಬೇಡಿ. ಮತ್ತು ನೀವು ಅವುಗಳನ್ನು ಸ್ವಾಧೀನಪಡಿಸಿಕೊಳ್ಳುವವರೆಗೆ ಸರಕುಗಳನ್ನು ಮಾರಾಟ ಮಾಡಬೇಡಿ. (ಸಾಹಿಹ್ ಅಲ್-ಬುಖಾರಿ, ಕಿತಾಬ್ ಅಲ್-ಬುಯು, ಅಧ್ಯಾಯ ಅಲ್-ಕೈಲ್, ಅಲಿ ಅಲ್-ಬಾಯಿ ವಲ್-ಮತ)

ಆದ್ದರಿಂದ, ಪ್ರತಿ ವ್ಯವಹಾರವನ್ನು ಕೂಲಂಕುಷವಾಗಿ ಸಂಶೋಧನೆ ಮಾಡಿದ ನಂತರ ಮಾಡಬೇಕು, ಇದರಿಂದ ಒಬ್ಬ ವ್ಯಕ್ತಿಯು ಮೋಸಹೋಗುವುದಿಲ್ಲ ಅಥವಾ ಇನ್ನೊಬ್ಬ ವ್ಯಕ್ತಿಯನ್ನು ಮೋಸಗೊಳಿಸುವುದಿಲ್ಲ, ಶಾರ್ಟ್ ಸೆಲ್ಲಿಂಗ್ ವ್ಯವಹಾರದಲ್ಲಿ, ಖರೀದಿದಾರನು ಕಂಪನಿಗಳ ಮಟ್ಟದಲ್ಲಿ ಮತ್ತು ವೈಯಕ್ತಿಕವಾಗಿ ವಂಚನೆಗೊಳಗಾಗುತ್ತಾನೆ. ಬೆಲೆ ಕುಸಿಯುವ ಷೇರುಗಳು ಕೆಲವು ದಿನಗಳ ನಂತರ ಈ ಷೇರುಗಳ

ಬೆಲೆ ಕುಸಿದಾಗ, ಅವುಗಳನ್ನು ಅಗ್ಗದ ಬೆಲೆಗೆ ಖರೀದಿಸಲಾಗುತ್ತದೆ ಮತ್ತು ಷೇರುಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಲಾಗುತ್ತದೆ ಎಂಬ ಉದ್ದೇಶದಿಂದ ಮಾರಾಟ ಮಾಡಲಾಗುತ್ತದೆ. ಈ ಷೇರುಗಳ ಬೆಲೆ ಕೆಲವೇ ದಿನಗಳಲ್ಲಿ ಕುಸಿಯುತ್ತದೆ ಎಂದು ತಿಳಿದಂತೆ, ಈ ಷೇರುಗಳನ್ನು ಖರೀದಿದಾರನಿಗೆ ಕತ್ತಲೆಯಲ್ಲಿಟ್ಟು ಮಾರಾಟ ಮಾಡಲಾಗುತ್ತದೆ.

ಜೊತೆಗೆ ಶೇರು ಮಾರುಕಟ್ಟೆಗೆ ಸಂಬಂಧಿಸಿದ ವಿವಿಧ ವ್ಯವಹಾರಗಳಲ್ಲಿ ಶಾರ್ಟ್ ಸೆಲ್ಲಿಂಗ್ ಬ್ಯುಸಿನೆಸ್ ಒಂದರ್ಥದಲ್ಲಿ ಜೂಜಿನಂತೆಯೇ ಇರುವುದರಿಂದ ಕೆಲವೊಮ್ಮೆ ಸಣ್ಣ ಮಾರಾಟಗಾರರು ಸ್ವಲ್ಪ ಸಮಯದ ಹಿಂದೆ ಗೇಮ್ ಸ್ವಾಪ್ ರೀತಿಯಲ್ಲಿ ಲಾಭ ಗಳಿಸುವ ಬದಲು ಭಾರಿ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಷೇರುಗಳ ಸಂದರ್ಭದಲ್ಲಿ.

ಆದ್ದರಿಂದ, ಇಸ್ಲಾಮಿಕ್ ಬೋಧನೆಗಳ ಬೆಳಕಿನಲ್ಲಿ, ಮುಮಿನ್ (ನಂಬಿಕೆಯುಳ್ಳ) ಉದ್ಯಮಿಯು ತನ್ನನ್ನು ತಾನು ಮೋಸಗೊಳಿಸಬಾರದು ಅಥವಾ ಇತರರನ್ನು ಮೋಸಗೊಳಿಸಬಾರದು, ಆದರೆ ಶುದ್ಧವಾಗಿ ವ್ಯಾಪಾರ ಮಾಡುವ ಮೂಲಕ ಆರ್ಥಿಕ ಲಾಭವನ್ನು ಗಳಿಸುವುದು ಮತ್ತು ತನ್ನ ಭಗವಂತನನ್ನು ಮೆಚ್ಚಿಸುವುದು.

**ಪ್ರಶ್ನೆ:** ಒಬ್ಬ ಅರಬ್ ಮಹಿಳೆ ಹುಝೂರ್ ಅನ್ವರ್[ಅತಬಿಅ] ಅವರ ಸೇವೆಯಲ್ಲಿ ಬರೆದಿದ್ದಾರೆ, ಯಾರಾದರೂ ಸತ್ತರೆ ಮತ್ತು ಅವನ ಕೆಲವು ಉಪವಾಸಗಳು ಉಳಿದಿದ್ದರೆ, ಅವನ ಮಕ್ಕಳು ಈ ಉಪವಾಸಗಳನ್ನು ಅವನ ಪರವಾಗಿ ಇಡಬಹುದು ಎಂದು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ಬಗ್ಗೆ ಜಮಾಅತ್ತಿನ ನಿಲುವೇನು? ಹುಝೂರ್ ಅನ್ವರ್[ಅತಬಿಅ] ಅವರು 24 ಮೇ 2021 ರ ಪತ್ರದಲ್ಲಿ ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ. ಹುಝೂರ್ ಅನ್ವರ್[ಅತಬಿಅ] ಹೇಳಿದರು.

**ಉತ್ತರ:** ನಮಾಝ್ ಮತ್ತು ಉಪವಾಸವು ಆರಾಧನೆಯ ದೈಹಿಕ ಕ್ರಿಯೆಗಳು, ಆದ್ದರಿಂದ ಅದರ ಪ್ರತಿಫಲವು ಈ ಆರಾಧನೆಗಳನ್ನು ನಿರ್ವಹಿಸುವ ವ್ಯಕ್ತಿಯನ್ನು ತಲುಪುತ್ತದೆ. ಆದ್ದರಿಂದ, ನಮ್ಮ ಪ್ರಕಾರ, ಸತ್ತವರ ಪರವಾಗಿ ನಮಾಝ್ ನಿರ್ವಹಿಸುವುದು ಮತ್ತು ಉಪವಾಸ ಮಾಡುವುದು ಸತ್ತವರ ಮಕ್ಕಳ ಜವಾಬ್ದಾರಿಯಲ್ಲ.

ಹಝ್ರತ್ ಇಮಾಮ್ ಅಬು ಹನೀಫಾ, ಇಮಾಮ್ ಮಲಿಕ್ ಮತ್ತು ಇಮಾಮ್ ಶಾಫಿ ಸೇರಿದಂತೆ ಹೆಚ್ಚಿನ ನ್ಯಾಯಶಾಸ್ತ್ರಜ್ಞರು ಈ ಉಪವಾಸಗಳನ್ನು ಮಾನ್ಯವೆಂದು ಪರಿಗಣಿಸುವುದಿಲ್ಲ ಮತ್ತು ಉಪವಾಸವು ಭೌತಿಕ ಆರಾಧನೆಯ ಕ್ರಮವಾಗಿದೆ, ಇದು ಷರೀಯತ್ತಿನ ತತ್ವಗಳ ಪ್ರಕಾರ ಕಡ್ಡಾಯವಾಗಿದೆ ಎಂಬ ವಾದವನ್ನು ಅವರು ಹೊಂದಿದ್ದಾರೆ.
(ಅಲ್-ಫಿಖ್ಹುತುಲ್ ಇಸ್ಲಾಮಿಯ ವ ಅದ್ಲ, ಕಿತಾಬುಸ್ಸೌಮ್, ಡಾ. ವಹ್ಬತ್ ಅಲ್-ಝುಹಿಲಿ ಅವರಿಂದ)

ಹದೀಸ್ ಪುಸ್ತಕಗಳಲ್ಲಿ ಈ ರೀತಿಯ ವರದಿಗಳ ನಿರೂಪಣೆಗಳಿಗೆ ಸಂಬಂಧಿಸಿದಂತೆ, ಹದೀಸ್ ವಿದ್ವಾಂಸರು ಮತ್ತು ವ್ಯಾಖ್ಯಾನಕಾರರು ಈ ಹದೀಸ್‌ಗಳ ವ್ಯಾಖ್ಯಾನದಲ್ಲಿ ವಿಭಿನ್ನ ಹದೀಸ್‌ಗಳನ್ನು ಉಲ್ಲೇಖಿಸಿದ್ದಾರೆ. ಉದಾಹರಣೆಗೆ ಸತ್ತವರ ಕಡೆಯಿಂದ ಆತನ ಪರವಾಗಿ ಆತನ ಮಕ್ಕಳು ಉಪವಾಸ ಅನುಷ್ಠಿಸಬೇಕೆಂಬ ವರದಿಯು ಹಝ್ರತ್ ಆಯಿಶಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರ ಕಡೆಯಿಂದ ವರದಿ ಮಾಡಿದ್ದಾರೆ, ಆದರೆ ಹದೀಸ್ ಗ್ರಂಥಗಳಲ್ಲಿ ಹಝ್ರತ್ ಆಯಿಶಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರ ಕಡೆಯಿಂದ ಸತ್ತವರ ಪರವಾಗಿ ಉಪವಾಸ ಮಾಡಬಾರದು, ಆದರೆ ಅವರ ಊಟ ಮಾಡಿಸುವ ಬಗ್ಗೆ ವರದಿಗಳು ಇವೆ. (ಫತ್ ಅಲ್-ಬಾರಿ ಶರ್ಹ್ ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಸೌಮ್) ಅದೇ ರೀತಿ, ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ವರದಿ ಮಾಡಿರುವಂತಹ ಅನೇಕ ವರದಿಗಳಲ್ಲಿ ಅನೇಕ ವ್ಯತ್ಯಾಸಗಳಿವೆ. ಹಾಗಾಗಿ ಒಂದೆಡೆ ಪ್ರಶ್ನಿಸುವವರು ಪುರುಷ ಮತ್ತೊಂದೆಡೆ ಮಹಿಳೆ ಇದ್ದಾರೆ. ಅದೇ ರೀತಿ ಉಪವಾಸಗಳ ಬಗ್ಗೆಯೂ ಭಿನ್ನಾಭಿಪ್ರಾಯವಿದೆ, ಅದು ರಂಜಾನ್‌ನ ಉಪವಾಸವೋ ಅಥವಾ ವ್ರತದ ಉಪವಾಸವೋ ಎಂಬುದು. ಹಾಗೆಯೇ ಒಂದೆಡೆ ಉಪವಾಸದ ಬಗ್ಗೆ ಕೇಳಿದರೆ ಇನ್ನೊಂದೆಡೆ ಹಜ್ ಯಾತ್ರೆಯ ಬಗ್ಗೆ ಕೇಳಲಾಗುತ್ತದೆ. (ಹಝ್ರತ್ ಸೈಯದ್ ಝೈನುಲ್ ಅಬಿದೀನ್ ವಲಿಯುಲ್ಲಾ ಶಾ ಸಾಹಿಬ್, ಸಂಪುಟ-3, ಪುಟ-630. ಕಿತಾಬ್ ಅಲ್-ಸೂಮ್ ಅವರಿಂದ ಶರ್ಹ್ ಅಲ್-ಬುಖಾರಿ)

ಹೀಗೆ, ಈ ರೀತಿಯ ಭಿನ್ನಾಭಿಪ್ರಾಯಗಳಿಂದಾಗಿ, ನಿಧನ ಹೊಂದಿದವರ ಪರವಾಗಿ ಉಪವಾಸ ಮಾಡುವ ಬಗ್ಗೆ ಮುಹದ್ದೀಸ್‌ಗಳಲ್ಲಿ ವಿಭಿನ್ನ ಅಭಿಪ್ರಾಯಗಳಿವೆ, ಆದರೆ ಅವರಲ್ಲಿ ಯಾರೂ ಅದನ್ನು ಕಡ್ಡಾಯವೆಂದು ಘೋಷಿಸಲಿಲ್ಲ.

ಹೇಗಾದರೂ, ಸತ್ತವರ ಪರವಾಗಿ ಅಲ್ಲಾಹನ ಸೃಷ್ಟಿಗೆ ಪ್ರಯೋಜನವಾಗುವಂತಹ ಕಾರ್ಯ ಮಾಡಿದರೆ ಅದು ಅದು ಸದಖ ಜಾರಿಯಾ (ನಿರಂತರವಾದ ದಾನವಾಗಿದೆ) ಆಗಿರುತ್ತದೆ, ಅದರ ಪ್ರತಿಫಲವು ಸತ್ತವರಿಗೆ ತಲುಪುತ್ತದೆ.

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಜಗತ್ತಿನಲ್ಲಿದ್ದರೆ, ಅವುಗಳನ್ನು ಸಂಗ್ರಹಿಸಲಾಗುತ್ತದೆ ಮತ್ತು ಪ್ರತಿ ಜನಾಂಗದ ಪ್ರವಾದಿಯರನ್ನು ಮುಂದೆ ತರಲಾಗುತ್ತದೆ ಮತ್ತು ಅವರ ಜನಾಂಗದ ಬಗ್ಗೆ ಸಾಕ್ಷಿ ಹೇಳಲಾಗುತ್ತದೆ. ಹೀಗಿರುವಾಗ ಆ ಸಮಯದಲ್ಲಿ ತಮಗಾಗುವ ಅವಮಾನದ ಬಗ್ಗೆ ಇವರೇಕೆ ಯೋಚಿಸುವುದಿಲ್ಲ.

ಇನ್ನೊಂದು ಸ್ಥಳದಲ್ಲಿ, ಈ ಅವಮಾನವನ್ನು ಈ ಕೆಳಗಿನ ಪದಗಳಲ್ಲಿ ಉಲ್ಲೇಖಿಸಲಾಗಿದೆ **ಫಕೈಫ ಇಝಾ ಜಿಅ್‌ನ ಮಿನ್ ಕುಲ್ಲಿ ಉಮ್ಮತಿನ್ ಬಿಶಹೀದಿ ವ್ವಜಿಅ್‌ನಾ ಬಿಕ ಅಲಾ ಹಾಉಲಾಇ ಶಹೀದ.... ಯೌಮೀಝಿಯ್ಯವದ್ದುಲ್ಲಝೀನ ಕಫರೂ ವ ಅಸಉರ್‌ರಸೂಲ ಲೌ ತುಸವ್ವಾ ಬಿಹಿಮುಲ್ ಅಝ್ಝ್** (ಅನ್ನಿಸಾ) ಅಂದರೆ ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ತಂದು, ಇವರಿಗೆ ಸಾಕ್ಷಿಯಾಗಿ ನಿನ್ನನ್ನೂ ತರುವಾಗ (ಇವರ) ಸ್ಥಿತಿ ಏನಾಗಿರಬಹುದು?....... ಅವಿಶ್ವಾಸವನ್ನು ಹೊಂದಿ ಪ್ರವಾದಿಯನ್ನು ಧಿಕ್ಕರಿಸಿದವರು ಆ ದಿನದಂದು, (ಅಲ್ಲಿ ಹಾಜರಾಗಲು ಸಂದರ್ಭ ಬಾರದೆ) ತಮ್ಮನ್ನು ಭೂಮಿಯಲ್ಲಿ ಹೂಳಿಟ್ಟು ನೆಲಸಮ ಮಾಡಿರುತ್ತಿದ್ದರೆ (ಎಷ್ಟು ಚೆನ್ನಾಗಿರುತಿತ್ತು!) ಎಂದು ಬಯಸುವರು. (ಅಂದು) ಅಲ್ಲಾಹನಿಂದ ಏನನ್ನೂ ಬಚ್ಚಿಡಲು ಅವರಿಗೆ ಸಾಧ್ಯವಿಲ್ಲ.

ಅಲ್ಲಾಹನು ಪ್ರತಿಯೊಂದು ಸಮೂದಾಯಕ್ಕೂ ಒಬ್ಬ ಪ್ರವಾದಿಯನ್ನು ಕಳುಹಿಸಿದ್ದಾನೆ ಎಂಬುದು ಈ ಆಯತ್‌ನಿಂದ ಸಾಬೀತು ಆಗುತ್ತದೆ. ಪವಿತ್ರ ಖುರ್‌ಆನ್ ಈ ನಂಬಿಕೆಯನ್ನು ವಿವಿಧ ಆಯತ್‌ಗಳಲ್ಲಿ ವಿವರಿಸಿದೆ ಮತ್ತು ಇದು ಎಲ್ಲಾ ಇತರ ಧರ್ಮಗಳಿಗಿಂತ ವಿಶಿಷ್ಟವಾಗಿದೆ ಮತ್ತು ಇದು ಅದರ ದೃಢೀಕರಣದ ಪ್ರಬಲ ಪುರಾವೆಗಳಲ್ಲಿ ಒಂದಾಗಿದೆ.

ಅಂದು ಅವಿಶ್ವಾಸಿಗಳಿಗೆ ಅನುಮತಿ ನೀಡಲಾಗುವುದಿಲ್ಲ ಎಂದು ಹೇಳಿದ್ದಕ್ಕೆ ಕೆಲವರು ಮಾತನಾಡಲು ಅನುಮತಿ ನೀಡುವುದಿಲ್ಲ ಎಂದು ಹೇಳಿದ್ದಾರೆ. ಈ ಅರ್ಥವು ಸರಿಯಲ್ಲ ಏಕೆಂದರೆ ಪವಿತ್ರ ಖುರ್‌ಆನ್‌ನ ಹಲವಾರು ಆಯತ್‌ಗಳ ಮೂಲಕ ಸತ್ಯವಿಶ್ವಾಸಿಗಳು ತೀರ್ಪಿನ ದಿನದಂದು ಸರ್ವಶಕ್ತನಾದ ಅಲ್ಲಾಹನೊಂದಿಗೆ ಮಾತನಾಡುತ್ತಾರೆ ಮತ್ತು ಅವರ ಕ್ಷಮೆಯನ್ನು ಸಹ ಮಂಡಿಸುತ್ತಾರೆ ಎಂದು ಸಾಬೀತಾಗಿದೆ. ಆದ್ದರಿಂದ **ಲಾ ಯುಝ್ಝನ** ಎಂದರೆ ಸ್ವರ್ಗಕ್ಕೆ ಪ್ರವೇಶಿಸಲು ಅನುಮತಿ ಅಥವಾ ಮಧ್ಯಸ್ಥಿಕೆ ಎಂದರ್ಥ ಮತ್ತು ಇದರರ್ಥ ಪ್ರವಾದಿಯವರು ತೀರ್ಪಿನ ದಿನದಂದು ಬಂದಾಗ ಅವರು ಸಂಪೂರ್ಣವಾಗಿ ಪರಿಪೂರ್ಣರಲ್ಲದ ತನ್ನ ಜನರ ಗಾಗಿ ಜನರಿಗೆ ಶಿಫಾಅತ್ ವಹಿಸಲು ಅನುಮತಿಸಲಾಗುವುದು, ಆದರೆ ಅವರು ಪ್ರವಾದಿಯನ್ನು ತನ್ನವರೆಂದು ಕರೆಯಲು ಸಾಧ್ಯವಾಗುತ್ತದೆ, ಆ ಸಮಯದಲ್ಲಿ, ಈ ಜನರು ಶಿಫಾಅತ್‌ನಿಂದ ವಂಚಿತರಾಗುತ್ತಾರೆ ಮತ್ತು ಅವರಿಗೆ ಶಿಫಾಅತ್‌ಅನ್ನು ಅನುಮತಿಸಲಾಗುವುದಿಲ್ಲ. ಪವಿತ್ರ ಖುರ್‌ಆನ್ ಮತ್ತು ಹದೀಸ್‌ನಿಂದ ಸಾಬೀತಾಗುವುದೇನೆಂದರೆ ಈ ಶೀಫಾಅತ್ ಅನುಮತಿಯ ಮೂಲಕ ನಡೆಯುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, **ವಲಾ ತನ್‌ಫಉ ಶ್ಶಫಾಅತು ಇಂದಹೂಇಲ್ಲಾ ಲೆಮನ್ ಅಝಿನ ಲಹೂ** (ಸಬಾ: ರುಕು-3), ಅಂದರೆ, ಅಲ್ಲಾಹನು ಅನುಮತಿ ನೀಡಿದ ವ್ಯಕ್ತಿಯ ಹೊರತು ಅಲ್ಲಾಹನ ಸನ್ನಿಧಿಯಲ್ಲಿ ಯಾವ ಶೀಫಾರಸೂ ಫಲಕಾರಿಯಾಗದು. ಸೂರಾ ಯೂನಸ್ ರುಕು 1, ತಾಹಾ ರುಕು 6 ಮತ್ತು ಅಲ್-ನಜ್ಮ್ ರುಕು 2 ಮತ್ತು ಸೂರಾ ಬಖರಃ ರುಕು 34 ರಲ್ಲಿ ಸಹ ಉಲ್ಲೇಖಿಸಲಾಗಿದೆ. ಹದೀಸ್‌ನಲ್ಲಿ ಶಿಫಾರಸ್ಸಿನ ಬಗ್ಗೆ ಇಝುನ್ ಎಂಬ ಪದ ಉಪಯೋಗಿಸಲಾಗಿದೆ. ಮಸ್ನದ್ ಅಹ್ಮದ್ ಹನ್ಬಲ್, ಸಂಪುಟ 5, ಪುಟ 43 ರಲ್ಲಿ ಅಬುಬಕರ್ ಅವರ ವರದಿಯಲ್ಲಿ ಅವರು ಹೀಗೆ ಹೇಳುತ್ತಾರೆ: **ಸುಮ್ಮ ಯುಝುನು ಲಿಲ್‌ಮಲಾಇಕತಿ ವನ್ನಬೀಈನ ವಶ್ಶುಹದಾಇ ಅನ್ ಯಶ್‌ಫಉ**- ಅಂದರೆ ನಂತರ ಅಲ್ಲಾಹನು ದೇವದೂತರು, ಪ್ರವಾದಿಗಳು ಮತ್ತು ಹುತಾತ್ಮರಿಗೆ ಶಿಫಾರಸ್ಸು ಮಾಡಲು ಅನುಮತಿಸುತ್ತಾನೆ.

ಈ ಅನುಮತಿಯ ಇನ್ನೊಂದು ಅರ್ಥವನ್ನು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾಗಿದೆ. ಇದು ಸೂರಾ ಅಲ್-ಮುರ್ಸಲಾತ್‌ನಲ್ಲಿದೆ, **ವಲಾ ಯುಝುನ ಲಹುಮ್ ಫಯಅ್‌ತಝಿರೂನ** ಅಂದರೆ ಅವಿಶ್ವಾಸಿಗಳಿಗೆ ಕ್ಷಮೆಯನ್ನು ಪ್ರಸ್ತಾಪಪಡಿಸಲು ಅನುಮತಿಯನ್ನು ನೀಡಲಾಗುವುದಿಲ್ಲ.

ಖಿಯಾಮತ್ ದಿನದಂದು ಪ್ರವಾದಿಗಳನ್ನು ಸಾಕ್ಷಿಗಳಾಗಿ ಪರಿಗಣಿಲಾಗುವುದು ಎಂದು ಹೇಳಲಾಗಿದೆ. ನನ್ನ ಅಭಿಪ್ರಾಯದಲ್ಲಿ ಪ್ರವಾದಿಗಳ ಸಾಕ್ಷಿ ಎಂದರೆ ಅವರ ಉದಾಹರಣೆಯಾಗಿದೆ, ಅವರು ಅವರ ಉದಾಹರಣೆಯನ್ನು ಪ್ರಸ್ತುತಪಡಿಸುತ್ತಾರೆ, ಅಲ್ಲಾಹನ ವಾಕ್ಯವು ನಮ್ಮ

*(ಪುಟ ಸಂಖೆ 09ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 25 August 2022, Issue No. 34

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಐರ್ಲ್ಯಾಂಡ್ನ ಪ್ರವಾಸ (ಸೆಪ್ಟೆಂಬರ್ 2014)*

### 21 ಸೆಪ್ಟೆಂಬರ್ 2014 ಭಾನುವಾರ

ಇಂದಿನ ದಿನ ಅಹ್ಮದಿಯಾ ಜಮಾಅತಿನ ಇತಿಹಾಸದಲ್ಲಿ ವಿಶೇಷವಾಗಿ ಐರ್ಲ್ಯಾಂಡ್ ಜಮಾಅತಿನ ಇತಿಹಾಸದಲ್ಲಿ ಒಂದು ಮಹತ್ವದ ಹಾಗೂ ಶುಭದಿನವಾಗಿದೆ.

ಇಂದು ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ಅವರು ಕ್ರೈಸ್ತರ ಕೇಂದ್ರ ಸ್ಥಳವಾಗಿರುವ ಐರ್ಲ್ಯಾಂಡ್‌ನಲ್ಲಿ (ಅಲ್ಲಿ ಪ್ರಸಕ್ತ ಸಮಯ ಒಂದು ಸಾವಿರ ಐದು ನೂರ ಐವತ್ತ ಐದು (1555) ಚರ್ಚ್‌ಗಳಿವೆ) ಏಕದೇವನ ಆರಾಧನೆ ಮಾಡಲು ನಿರ್ಮಿಸಲ್ಪಡುವ ಮೊದಲ ಮಸೀದಿ ಅಹ್ಮದಿಯಾ ಜಮಾಅತಿನ "ಮಸ್ಜಿದ್ ಮರ್ಯಮ್" ನ ಉದ್ಘಾಟನೆ ಮತ್ತು ಆ ದೇಶದ ಜನತೆಯನ್ನು ಏಕದೇವನೆಡೆ ಆಹ್ವಾನಿಸಲು ಹಾಗೂ ಇಸ್ಲಾಮಿನ ಯಥಾರ್ಥ ಹಾಗೂ ಶಾಂತಿಪೂರ್ಣ ಶಿಕ್ಷಣ ನೀಡಲು ಐರ್ಲ್ಯಾಂಡ್‌ನ ಎರಡನೆಯ ಬಾರಿಯ ಪ್ರವಾಸವನ್ನು ಕೈಗೊಂಡಿದ್ದಾರೆ.

ಇದಕ್ಕಿಂತ ಮೊದಲು ಹುಝೂರೆ ಅನ್ವರ್ (ಅಬಿಅ) 14 ಸೆಪ್ಟೆಂಬರ್ ರಿಂದ 20 ಸೆಪ್ಟೆಂಬರ್ 2010 ರವರೆಗೆ ಆ ಐರ್ಲ್ಯಾಂಡ್‌ನ ಪ್ರವಾಸ ಕೈಗೊಂಡಿದ್ದರು. ಆ ನಡುವೆ 17 ಸೆಪ್ಟೆಂಬರ್ ಶುಕ್ರವಾರದಂದು ಈ ಮಸೀದಿಯ ಅಡಿಗಲ್ಲನ್ನು ಹಾಕಿದ್ದರು.

ಇಂದು ಈ ಪ್ರವಾಸ ಹುಝೂರೆ ಅನ್ವರ್ (ಅಬಿಅ) ಎರಡು ಮುಕ್ಕಾಲು ಗಂಟೆಗೆ ತನ್ನ ವಸತಿ ನಿಲಯದಿಂದ ಹೊರ ಬಂದರು. ಹುಝೂರ್‌ರನ್ನು ಬೀಳ್ಕೊಡಲು ಜಮಾಅತ್ ಬಾಂಧವರು, ಸ್ತ್ರೀ ಪುರುಷರು, ಮಸ್ಜಿದ್ ಬೈತುಲ್ ಫಝ್ಲ್ ಹೊರಾಂಗಣದಲ್ಲಿ ಬಂದು ಸೇರಿದ್ದರು. ಆ ಸಂದರ್ಭದಲ್ಲಿ ಮುಕರ್ರಮ್ ಮೀರ್ ಮೊಹ್ಮೂದ್ ಅಹ್ಮದ್ ಸಾಹಿಬ್ ಹುಝೂರ್ ಅನ್ವರ್ ಅವರೊಂದಿಗೆ ಹಸ್ತಲಾಘವ ಮಾಡುವ ಭಾಗ್ಯ ಪಡೆದರು. ಹುಝೂರೆ ಅನ್ವರ್ ತನ್ನ ಕೈಯನ್ನು ಬೀಸುತ್ತಾ ಎಲ್ಲರಿಗೂ ಅಸ್ಸಲಾಮು ಅಲೈಕುಂ ತಿಳಿಸುತ್ತಾ ಸಾಮೂಹಿಕ ದುಆ (ಪ್ರಾರ್ಥನೆ) ನಿರ್ವಹಿಸಿದರು.

ಅನಂತರ ಬ್ರಿಟಾನಿಯಾದ ಹಡಗು ತಂಗುದಾಣ Holyhead ನತ್ತ ಪ್ರಯಾಣಿಸಿದರು. ಲಂಡನ್ನಿನಿಂದ ಈ ಹಡಗು ತಂಗುದಾಣದ ದೂರ ಮೂರು ನೂರು ಮೈಲಿನಷ್ಟಿವೆ. ಸಮುದ್ರದಡದಲ್ಲಿ ವಾಸಿಸುವ Holyhead ನಗರ ವೇಲ್ಸ್ ರಾಜ್ಯದಲ್ಲಿ Anglessy county ಯ ದೊಡ್ಡ ನಗರವಾಗಿದೆ. ಈ ನಗರದ ಮತ್ತು ಹಡಗು ತಂಗುದಾಣದ ವಿಶೇಷತೆಯೇನೆಂದರೆ ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದಿನಿಂದ ಬ್ರಿಟಾನಿಯಾದ ಈ ಹಡಗು ತಂಗುದಾಣದಿಂದ ಐರ್ಲ್ಯಾಂಡ್‌ನ ಹಡಗು ತಂಗುದಾಣ Dublin ವರೆಗಿನ ಈ ಸಮುದ್ರ ಮಾರ್ಗ ವ್ಯಾಪಾರಕ್ಕಾಗಿ ಉಪಯೋಗಿಸಪಡುತ್ತಿದೆ. ಇಲ್ಲಿಂದ ಹಡಗುಗಳ ಪಯಣ ನಾಲ್ಕು ಸಾವಿರ ವರ್ಷಗಳ ಹಿಂದಿನಿಂದ ಜಾರಿಯಲ್ಲಿದೆ. ಆ ಕಾರಣದಿಂದ Holyhead ನ ಈ ಹಡಗು ತಂಗುದಾಣವನ್ನು "ಐರಿಷ್ ಸೀ ಪೋರ್ಟ್" ಎನ್ನಲಾಗುತ್ತದೆ. ಸುಮಾರು ಐದು ಗಂಟೆ 20 ನಿಮಿಷಗಳ ಪ್ರವಾಸದ ನಂತರ ಹುಝೂರೆ ಅನ್ವರ್ ನಗರಕ್ಕೆ ಆಗಮಿಸಿದರು. ಅಲ್ಲಿ ಮು. ಡಾ॥ ನಸೀರ್ ಅಹ್ಮದ್ ಸಾಹಿಬ್ ಸ್ಥಳೀಯ ಅಮೀರರು, North west Region, ಮು. ಕಲೀಮ್ ಅಹ್ಮದ್ ಬಾಜ್ವಾ ಸಾಹಿಬ್ ಸದರ್ ಜಮಾಅತ್ ನಾರ್ಥ್‌ವೆಲ್ ಅವರು ಹುಝೂರ್‌ರಿಗೆ ಸ್ವಾಗತಿಸಿ ಹಸ್ತಲಾಘವ ಭಾಗ್ಯ ಪಡೆದರು. ಇಂದು ರಾತ್ರಿ ತಂಗುವ ವ್ಯವಸ್ಥೆ ಅದೇ ನಗರದ ಒಂದು ಭಾಗದಲ್ಲಿನ Blacthorm farm ನ ಒಂದು ವಸತಿ ವಿಭಾಗದಲ್ಲಿ ಮಾಡಲಾಗಿತ್ತು.

ಹುಝೂರ್(ಅಬಿಅ) ತನ್ನ ವಸತಿ ಪ್ರದೇಶಕ್ಕೆ ತೆರಳಿದರು. "ಮಗ್ರಿಬ್, ಇಶಾಅ" ನಮಾಝ್ ನಿರ್ವಹಿಸುವ ಏರ್ಪಾಡು ಅದೇ ವಿಭಾಗದ ಒಂದು ಭಾಗದಲ್ಲಿ ಮಾಡಲಾಗಿತ್ತು. 8 ಗಂಟೆ 35 ನಿಮಿಷಕ್ಕೆ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ಪ್ರೀತಿಪೂರ್ವಕವಾಗಿ ಅಲ್ಲಿಯ ಖುದ್ದಮರ ಜೊತೆ ಮಾತನಾಡಿಸಿದರು ಅವರು Liverpool ನಿಂದ ಇಲ್ಲಿ ಡ್ಯೂಟಿ ಮಾಡಲು ಬಂದು ತಲುಪಿದ್ದರು. ಹುಝೂರೆ ಅನ್ವರ್ ಕೇಳಿದಕ್ಕೆ ಖುದ್ದಾಮರು ಹೇಳಿದರು. ಅವರು ಸುಮಾರು ಒಂದು ನೂರ ಹತ್ತು ಮೈಲಿನ ದೂರ ಪ್ರಯಾಣಗೈದು ಇಲ್ಲಿ ಬಂದಿರುತ್ತಾರೆ.

ಹಡಗು ತೀರ Blackthorm Farm ನ ಈ ಕ್ಷೇತ್ರ ಒಂದು camping Area ಆಗಿರುತ್ತದೆ. ಆ ಖುದ್ದಮರು ಸಹ ಒಂದು ದೊಡ್ಡ Tent ಹಾಕಿಕೊಂಡಿದ್ದರು. ಹುಝೂರೆ ಅನ್ವರ್ ಪ್ರೀತಿಯಿಂದ ಆ Tent ಅನ್ನು ಸಹ ವೀಕ್ಷಿಸಿದರು. ಮತ್ತು ವ್ಯವಸ್ಥಾಪಕರಿಂದ ಆ ಕ್ಷೇತ್ರದ ಬಗ್ಗೆ ವಿವರ ಪಡೆದರು.

ಅನಂತರ ವಿಭಾಗೀಯ ಅಮೀರರು ನಾರ್ಥ್‌ವೆಸ್ಟ್ ಮತ್ತು ನಾರ್ಥ್ ವೆಲ್ಸ್‌ನ ಜಮಾಅತಿನ ಅಧ್ಯಕ್ಷರು ತಿಳಿಸಿದರು ಅಲ್ಲಾಹನ ಅನುಗ್ರಹದಿಂದ ನಾರ್ಥ್‌ವೆಲ್ಸ್ ಜಮಾಅತಿನ ಮಸೀದಿ ನಿರ್ಮಾಣಕ್ಕಾಗಿ ಒಂದು ಕಟ್ಟಡ ಖರೀದಿಸಿದೆ. ಹುಝೂರೆ ಅನ್ವರ್(ಅಬಿಅ) ಮಾನ್ಚಿಸ್ಟರ್‌ನಲ್ಲಿರುವ ಮಸ್ಜಿದ್ ದಾರುಲ್ ಅಮಾನ್ ಉದ್ಘಾಟನೆಯ ನಂತರ ನಿರ್ಗಮಿಸುತ್ತಿದ್ದರು. ಆಗ ಹುಝೂರೆ ಅನ್ವರ್ ಖಾಝೀ ನಾಸಿರ್ ಅಹ್ಮದ್ ಭಟ್ಟ್ ಸಾಹಿಬ್ ನಾಥ್‌ವೆಲ್ಸ್ ನಿರ್ಮಿಸಿ ಅವರನ್ನು ಸಂಬೋಧಿಸಿ ಕೇಳಿದ್ದರು. ಈಗ ನೀವು ಸಹ ಇಲ್ಲಿಂದ ಮರಳಿ ಹೋಗಿ ಮಸೀದಿಯ ವ್ಯವಸ್ಥೆ ಮಾಡಬೇಕೆಂದು ಹುಝೂರ್ ಅನ್ವರ್ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದರು. ಐರ್ಲ್ಯಾಂಡ್ ಹೋಗುವಾಗ ನಿಮ್ಮ ಕಡೆಯಿಂದ ಹೋಗುವೆನು. ಹಾಗೆ ಸ್ಥಳೀಯ ಜಮಾಅತ್ ಹುಝೂರೆ ಅನ್ವರ್ ಅವರ ಆ ಆಶಯದ ಮೇಲೆ ಸಿದ್ಧಗೊಂಡು ನಾವು ಫೆಬ್ರವರಿ 2014 ರಲ್ಲಿ ಮಸೀದಿಗೋಸ್ಕರ ಸ್ಥಳ ಖರೀದಿಸಿದೆವು. ಆಗ ಹುಝೂರ್ ನುಡಿದರು. ಇನ್‌ಶಾಅಲ್ಲಾಹ್ ಐರ್ಲ್ಯಾಂಡಿನಿಂದ ಮರಳುವಾಗ ನೋಡುವೆನು.

ಅನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

### 22 ಸೆಪ್ಟೆಂಬರ್ 2014 ಸೋಮವಾರ

ಹುಝೂರ್ ಅನ್ವರ್ ಮುಂಜಾನೆ 6 ಗಂಟೆಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ಫಜರ್ ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ವಸತಿ ಭಾಗಕ್ಕೆ ತೆರಳಿದರು. 11:30 ಗಂಟೆಗೆ ಹುಝೂರ್ ಅನ್ವರ್ ತನ್ನ ವಸತಿಗೃಹ ದಿಂದ ಹೊರಗೆ ಆಗಮಿಸಿದರು. ಸುಮಾರು 40 ನಿಮಿಷದವರೆಗೆ ತನ್ನ ಖುದ್ದಾಮರ ನಡುವೆ ಪ್ರವೇಶಿಸಿ ಮಾತನಾಡಿದರು. ಹುಝೂರೆ ಅನ್ವರ್ ಈ ನಡುವೆ ಕಡಲತೀರ ವಾಸಿಗರ ಸ್ಥಳವಾದ ಆ ಸುಂದರವಾದ ಕ್ಷೇತ್ರದ ಚಿತ್ರಗಳನ್ನು ತೆಗೆದುಕೊಂಡರು. ಮತ್ತು ತನ್ನ ಖುದ್ದಮರ ಜೊತೆ ವಿವಿಧ ಕಾರ್ಯಗಳ ಕುರಿತು ಚರ್ಚಿಸಿದರು. ವಿಶೇಷವಾಗಿ ಮೊಬೈಲ್ ಫೋನಿನಲ್ಲಿ ಆಗುತ್ತಿರುವ ಆಧುನಿಕ ತಂತ್ರಗಳ ಬಗ್ಗೆ ಹುಝೂರೆ ಅನ್ವರ್ ವಿವಿಧ ದೃಷ್ಟಿಕೋನದಿಂದ ಚರ್ಚಿಸಿದರು.

ಮಾನ್ಯ ಡಾ॥ ಅಬ್ದುಲ್ ಮೂಮೀನ್ ಜದ್ರಾನ್ ಸಾಹಿಬ್‌ರವರು ಖರೀದಿಸಿದ ಹೊಸ ವಾಹನ ಸಹ ಆ ತಂಡದಲ್ಲಿ ಸೇರಿತ್ತು. ಹುಝೂರೆ ಅನ್ವರ್ ಆತ್ಮಿಯತೆಯಿಂದ ಆ ವಾಹನದ ಬಳಿ ಬಂದು ಅದರಲ್ಲಿರುವ ಹೊಸ ಸಿಸ್ಟಮ್ ಮತ್ತು ಸವಲತ್ತುಗಳ ಕುರಿತು ವಿಚಾರಿಸಿದರು.

ನಂತರ ತನ್ನ ಕ್ಯಾಮರಾದಿಂದ ತಂಡದ ಸದಸ್ಯರು ಹಾಗೂ ಉಪಸ್ತಿತರ ಬಾವ ಚಿತ್ರಗಳನ್ನು ಪಡೆದರು. ಮತ್ತು ಕರ್ತವ್ಯಕ್ಕೆ ಹಾಜರಾದ ಖುದ್ದಾಮರಿಗೆ ಪ್ರೋತ್ಸಾಹ ನೀಡಿದರು. ಅನಂತರ ಸುಮಾರು 12 ಗಂಟೆಗೆ ತನ್ನ ವಸತಿನಿಲಯಕ್ಕೆ ತೆರಳಿದರು.

ನಂತರ ಕಾರ್ಯಕ್ರಮದನ್ವಯ ಇಲ್ಲಿಂದ ಹಡಗು ತಂಗುದಾಣಕ್ಕೆ ಪ್ರಯಾಣಿಸಬೇಕಾಗಿತ್ತು. ಇಲ್ಲಿಂದ ಅದು ಕೇವಲ 10 ನಿಮಿಷದ ದಾರಿ ಇತ್ತು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.